# ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

ಜ್ಯೇಷ್ಠ– ಆಷಾಢ

ಸಂಪುಟ 3 ಸಂಚಿಕೆ 3

ಸಂಪಾದಕರು : ಮನೋರಮಾ. ಬಿ.ಎನ್

ವೆಬ್‌ಸೈಟ್ ವಿನ್ಯಾಸ : ಮಹೇಶ್ ಎಳ್ಯಡ್ಕ,
ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.

ವಿತರಣಾ ಮುಖ್ಯಸ್ಥ : ವಿಷ್ಣುಪ್ರಸಾದ್ ನಿಡ್ಡಾಜೆ

ಕಛೇರಿ ನಿರ್ವಹಣೆ : ರಾಜ್‌ಗೋಪಾಲ್.ಬಿ.ಎನ್

ಪ್ರಕಾಶನ : 'ಸಾನಿಧ್ಯ', ಮಡಿಕೇರಿ

ಮುಖಪುಟ ವಿನ್ಯಾಸ : ಸುನೀಲ ಕುಲಕರ್ಣಿ

ಪುಟ ವಿನ್ಯಾಸ ಹಾಗೂ ಮುದ್ರಣ : ಅಕ್ಷರೋದ್ಯಮ, ಮಂಗಳೂರು


## ಈ ಸಂಚಿಕೆಯಲ್ಲಿ ..... ಗ್ರೀಷ್ಮ ಗಾಂಭೀರ್ಯ


ಮಂಜೀರ ........ 3
ನುಡಿ– ನಮನ–ಅಂಜಲಿ : ಚಿಪಾರು ಕೃಷ್ಣಯ್ಯ ಬಲ್ಲಾಳರು........ 5
ಹಸ್ತ ಮಯೂರಿ : ಪದ್ಮಕೋಶ ಹಸ್ತ ........ 8
ದೀವಟಿಗೆ : 1. ಶಾಸ್ತ್ರೀಯ ನೃತ್ಯಗಳ ಆಂಗಿಕಾಭಿನಯ ಪ್ರಾತ್ಯಕ್ಷಿಕೆ : ಯಕ್ಷ ಅನೌಚಿತ್ಯದ ನಡುವೆ ಬೆಳಗಿದ ಕಥಕ್ಕಳಿ ........ 10
2. ಭರತ–ಭಾವ–ನೃತ್ಯ ........ 15
ಅಂಗಳದ ಮಾತು ತಿಂಗಳ ಚರ್ಚೆ : ಯಕ್ಷಗಾನ ಕಾರ್ಯಾಗಾರ ಮತ್ತು ಪಾಠಪಟ್ಟಿ ........ 16
ರಂಗಸ್ಥಳ : ಶೇಣಿಯೆಂದರೆ ವಾಲಿಯ ಹಾಗೆ ! ........ 20
ಒಳನೋಟ ........ 22
ನಿಮ್ಮ ಬರೆಹ ನಮ್ಮ ಓದು ........ 24



All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own and not of Noopura Bhramari.

Visit Our website : **ww.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು ಪ್ರತೀ ತಿಂಗಳ 20 ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.






## ಮಂಜೀರ

'ಯಕ್ಷಗಾನವನ್ನು ನೋಡ್ಬೇಡಿ, ಒಂದು ವೇಳೇ ಕಲಿತರಂತೂ ನಿಮಗೆ ನೃತ್ಯ ಕಲಿಸಲಾಗುವುದಿಲ್ಲ, ಮತ್ತು ನೃತ್ಯಕ್ಕೆ ಅರ್ಹರೆನಿಸಿಕೊಳ್ಳಬೇಕಾದರೆ ಅಷ್ಟು ಸುಲಭವೂ ಆಗುವುದಿಲ್ಲ. ಯಕ್ಷಗಾನವನ್ನು ಕಲಿತರೆ ನೃತ್ಯ ಶೈಲಿ ಹಾಳಾಗುತ್ತದೆ. ಅದರ ಭಾವವೇ ಆಳವಾಗಿ ಬೇರೂರುತ್ತದೆ. ನೃತ್ಯದಲ್ಲಿರುವ ಲಾಸ್ಯದ ಅಂಶಗಳನ್ನು ಯಕ್ಷಗಾನವೆಂಬ ಗಂಡು ಕಲೆ ನುಂಗಿ ಹಾಕಿಬಿಡುತ್ತದೆ !' – ಇಂತಹದೊಂದು ಹೇಳಿಕೆ ಕಲಾವಲಯದಲ್ಲಿ ಕೇಳಿಬರುತ್ತಲಿದೆ. ಅದರಲ್ಲೂ ಶೈಲಿ, ಸಂಪ್ರದಾಯಗಳಿಗೆ ಬದ್ಧರಾಗಿರುವ ಮಂದಿಗಳಲ್ಲಿ ಇದರ ಪ್ರಮಾಣ ಹೆಚ್ಚು. ಕೊನೆಗೆ ಎಷ್ಟು ತೀವ್ರವೆಂದರೆ ನೃತ್ಯದಲ್ಲಿ ಮಾಡುವ ಯಾವುದೇ ರೀತಿಯ ಭಾವ ಪ್ರದರ್ಶನವೂ ಕೂಡಾ ಯಕ್ಷಗಾನದ ಛಾಯೆಯಾಗಿಯೇ ತೋರುವುದು ! ಹುಚ್ಚೋ, ಬೆಪ್ಪೋ, ಅತಿರೇಕವೋ ನಾನರಿಯೆ !

ಆಘಾತವೆಂದರೆ ಇಂತಹ ಮನೋಪ್ರವೃತ್ತಿ ಭರತನಾಟ್ಯ ಅಭ್ಯಾಸಿಗಳನ್ನೇ ಇತ್ತೀಚೆಗೆ ಹೆಚ್ಚಾಗಿ ಕಾಡುವುದು! ಇಂತಹ ಬೋಧನೆಗೆ ಅಧಾರಗಳೇನು? ಹೌದೇ? ಹೇಗೆ? ಯಾಕೆ ನೋಡಬಾರದು ಎಂಬ ಪ್ರಶ್ನೆಗಳು ಉದ್ಭವವಾಗುವ ಹೊತ್ತಿನಲ್ಲೇ ಅದನು ಸಮರ್ಥಿಸಿಕೊಳ್ಳುವ ಗುರು–ಕಲಾವಿದರು ಮತ್ತಷ್ಟು ತಮ್ಮ ವಾದಗಳಿಗೇ ಅಂಟಿಕೊಳ್ಳುತ್ತಿರುವುದು ನೃತ್ಯಕ್ಕಿಟ್ಟುಕೊಳ್ಳುತ್ತಿರುವ ಕಪ್ಪುಚುಕ್ಕಿ ಎನ್ನದೇ ಬೇರೆ ವಿಧಿಯಿಲ್ಲ.

"ಭರತನಾಟ್ಯವನ್ನು ಕಲಿತವರು ಯಕ್ಷಗಾನವನ್ನು ನೋಡಬಾರದು, ಮಾಡಬಾರದೆಂದರೆ ಹೇಗೆ ? ಅಂತಹ ಕಡ್ಡಾಯದ ಕ್ರಮಗಳಿದ್ದದ್ದೇ ಆದಲ್ಲಿ ಯಾವ ಶಾಸ್ತ್ರ ಗ್ರಂಥಗಳಲ್ಲಿದೆ? ಹಾಗೊಂದು ವೇಳೆ ಇದ್ದರೂ ಅದು ಕಲೆಯೆಂದು ಹೇಗೆ ಕರೆಸಿಕೊಂಡೀತು ? ತುಲನಾತ್ಮಕ ದೃಷ್ಟಿಯಿಲ್ಲದೆ ಕಲಾಪ್ರಕಾರಗಳ ಒಳಹೊರಗನ್ನು ತಿಳಿಯುವ ಸಾಧ್ಯತೆ ಹೇಗೆ?"– ಎಂಬಿತ್ಯಾದಿ ಸವಾಲುಗಳನ್ನೆಸೆದರೆ ಬಹುಷಃ ವಾದಿಗಳಲ್ಲಿ ಉತ್ತರವಿರಲಿಕ್ಕಿಲ್ಲ; ವಿತಂಡ ವಾದಗಳ ಹೊರತು ! 'ನಮಗಿಂತ ಹಿರಿಯರಿಲ್ಲ' ಎಂಬ ಧೋರಣೆ, 'ಮತ್ತೊಂದು ಕಲೆ ನಮ್ಮ ಸೌಂದರ್ಯವನ್ನು ಭ್ರಷ್ಟಗೊಳಿಸುತ್ತದೆ' ಎಂಬ ಕೊಂಕು ಮಾತು, 'ನಮ್ಮಲ್ಲಿಲ್ಲದ್ದದ್ದು ಅದರಲ್ಲೇನಿದೆ' ಎಂಬ ಅಸಡ್ಡೆಯೇ ನಮ್ಮ ಸಂಸ್ಕೃತಿಯನ್ನು ಧಿಕ್ಕರಿಸುತ್ತಿದೆ ಎಂದೀಗ ಹೇಳದೆ ವಿಧಿಯಿಲ್ಲ.

ಕಲೆಯೇ ಸೌಂದರ್ಯ. ಅದೀಗ ಮತ್ತೊಂದು ಕಲೆಯನ್ನು ಭ್ರಷ್ಟಗೊಳಿಸುತ್ತದೆ ಎಂದರೆ ಅದು ಕಲೆಯೆಂದು ಕರೆಸಿಕೊಳ್ಳಲು ಅರ್ಹವಾಗಿದ್ದಾದರೂ ಹೇಗೆ? ನಗಬೇಕೋ..? ಅಳಬೇಕೋ..?

ಹಾಗೆ ನೋಡಿದರೆ ಇಂತಹ ಧೋರಣೆ ಇತರ ಸೋದರ ಕಲೆಗಳನ್ನು ಅಷ್ಟಾಗಿ ಆವರಿಸಿಲ್ಲ ! ಬದಲಾಗಿ ಒಟ್ಟಿಗೇ ಹಲವು ಶಾಸ್ತ್ರೀಯ ನೃತ್ಯ ಪ್ರಕಾರಗಳನ್ನು ಕಲಿಯುವುದು, ಪದವಿಗಳನ್ನು ಪಡೆಯುವುದು, ಒಂದೇ ರಂಗಮಂಚದಲ್ಲಿ ಶಾಸ್ತ್ರೀಯ ನೃತ್ಯ ರಂಗಪ್ರವೇಶವೆಂಬ ಹೊಸ ಕ್ರಮಕ್ಕೆ ಸಾಕ್ಷಿಯಾಗುವುದು ಇಂದಿನ ಸಾಂಸ್ಕೃತಿಕ ರಂಗದಲ್ಲಿ ಪ್ರತಿಷ್ಠೆಯ, ಪ್ರತಿಭೆಯ ವಿಷಯ. ಏನೇ ಇರಲಿ, ಕಥಕ್ಕಳಿ ಒಮ್ಮೊಮ್ಮೆ ಮಣಿಪುರಿಯನ್ನುಳಿದು ಉಳಿದೆಲ್ಲಾ ನೃತ್ಯಪ್ರಕಾರಗಳೂ ಒಟ್ಟಿಗೇ 'ತುಣುಕು ವೈಭವ'ಗಳನ್ನು ಕಾಣುತ್ತವೆ.

ಅಷ್ಟಕ್ಕೂ ಭರತನಾಟ್ಯಕ್ಕೆ ಸಮಕಾಲೀನವಾಗಿ ತೆರೆದುಕೊಂಡ ಅದೆಷ್ಟೋ ಪ್ರದರ್ಶಕ ಕಲೆಗಳು ನಮ್ಮ ಭಾರತೀಯ ಸಂಸ್ಕೃತಿಯ ಮೂಲಸ್ರೋತವಾಗಿದೆ. ಆದರೆ ಯಕ್ಷಗಾನದಂತಹ ಶಾಸ್ತ್ರೀಯ ಮಾನದಂಡ ಪಡೆದುಕೊಳ್ಳುತ್ತಿರುವ ಮೇಲ್ಮಟ್ಟದ ಅಭಿವ್ಯಕ್ತಿಯೆಂದು ಕರೆಸಿಕೊಂಡ ವಿದ್ವತ್ ಪೂರ್ಣ ಕಲೆಗೆ ಇಂದಿಗೂ ಅಂಟಿದ ಕಳಂಕ ನಿವಾರಣೆಯಾಗಿಲ್ಲ. ಒಂದು ನಿಟ್ಟಿನಲ್ಲಿ ಅದರಲ್ಲಿನ ಅಭಿವ್ಯಕ್ತಿಗಳ ಸಮಗ್ರತೆಯ ಕೊರತೆಯೂ ಒಂದು ಕಾರಣ.

ಒಂದು ಕಲೆಯಿಂದ ಮತ್ತೊಂದು ಕಲಾಪ್ರಕಾರ ವಿಭಿನ್ನ. ಹೌದು. ಮತ್ತು ಆದರೆ ಒಂದನ್ನು ಅರಿಯುವಲ್ಲಿ ಹೆಜ್ಜೆಯಿಟ್ಟ ಮನಸ್ಸಿಗೆ ಮತ್ತೊಂದನ್ನು ಅರಿಯುವುದು ಕಷ್ಟದ ಕೆಲಸವೇನಲ್ಲ. ಒಂದುರೀತಿಯಲ್ಲಿ ಅಂತಹ ಅರಿಯುವಿಕೆಗಳೇ ಕಲೆಯ ಕುರಿತಾದ ಆಳ ಅಧ್ಯಯನಕ್ಕೆ ನಾಂದಿ ಹಾಡುತ್ತವೆ. ಉತ್ತಮವೆನಿಸಿದ್ದು

ಯಾವಾಗಲೂ ಮತ್ತೊಂದು ಒಳ್ಳೆಯದನ್ನೂ ಕಣ್ಬಿಟ್ಟು ನೋಡುತ್ತದೆ. ತನ್ನಲ್ಲಿಲ್ಲದ ಎಷ್ಟೋ ಅಂಶಗಳನ್ನು ಅಳವಡಿಸಿಕೊಳ್ಳುತ್ತದೆ. ಜೀವನಾನುಭವಕ್ಕೆ ಮಾದರಿ ಪ್ರತಿಮೆಗಳನ್ನು ಒದಗಿಸಿಕೊಡುತ್ತಿವೆ. ಇಂತಹ ಕೊಡು–ಕೊಳ್ಳುವಿಕೆಯ ಬಂಧಗಳು ಇರುವುದರಿಂದಲೇ ಇಂದಿಗೂ ಭಾರತದ ಅದೆಷ್ಟೋ ಕಲಾಪ್ರಕಾರಗಳು ಇಂದಿಗೂ ಅರಳಿ ನಿಂತದ್ದು. ಸೋದರ ಕಲೆಗಳನ್ನು ಕಲಿಯುವುದರಿಂದ ಮತ್ತು ಪರಸ್ಪರ ವಿಶಿಷ್ಟ ಅಂಶಗಳನ್ನು ಅಳವಡಿಸಿಕೊಳ್ಳುವುದರಿಂದ ಸೃಜನಶೀಲ ಪ್ರಕ್ರಿಯೆ ನಿರಂತರ ಚಾಲನೆಯಲ್ಲಿರುತ್ತದೆ. ಒಳಿತಿನ ಅನುಕರಣೆ, ಅನುಸರಣೆಯೇ ಒಂದು ಅನನ್ಯ ಅನುಭವ.

‘ಆನೋ ಭದ್ರಾಃ ಕೃತವೋ ಯಂತು ವಿಶ್ವತಃ’

ಕಲೆ ಬೆಳೆದು ಬಂದದ್ದೇ ಲೋಕೋಭಿನ್ನರುಚಿಗಾಗಿ. ವೈವಿಧ್ಯತೆಗಳೇ ಸಾಂಸ್ಕೃತಿಕ ಸಂದರ್ಭದ ಜೀವಾಳ. ವೈವಿಧ್ಯತೆಗಳೇ ಜೀವನದ ಬಂಡವಾಳ. ಮತ್ತು ಆ ವೈವಿಧ್ಯತೆಯೊಳಗೊಂದು ಏಕತೆಯ ದೃಷ್ಟಿಯಿದ್ದರಲ್ಲವೇ ಸಮಷ್ಟಿಯು ಸ್ವರ್ಗ ! ಏಕತಾನತೆಯ ಸ್ವರೂಪ ಚೆಂದವೆನಿಸಿದರೂ ಅದರ ಆಯುಷ್ಯ, ಅನುಭೂತಿ ಕೆಲವೇ ಕ್ಷಣ ಅಥವಾ ದಿನ. ಆದ್ದರಿಂದ ಇಂತಹ ವೈವಿಧ್ಯತೆಯನ್ನೇ ನಿರಾಕರಿಸಿದರೆ ಸಾಂಸ್ಕೃತಿಕ ರಂಗಕ್ಕೆ ನಮ್ಮನ್ನು ನಿಕಟರನ್ನಾಗಿಸುವುದಾದರೂ ಹೇಗೆ? ಪ್ರಸ್ತುತವಾಗುವುದಾದರೂ ಎಂತು?

ಹಾಗಾದರೆ ಕಲೆಯ ವಿಭಾಗೀಕೀರಣ ಬೇಡವೇ? ಬೇಕು. ನಮ್ಮ ಅರಿವಿನ ಹೊಂದಾಣಿಕೆಗಾಗಿಯಷ್ಟೇ ಇಂತಹ ಪ್ರತ್ಯೇಕಿಸಿಕೊಂಡು ನೋಡುವ ದೃಷ್ಟಿಯಿರಬೇಕೇ ವಿನಃ ಅವುಗಳಲ್ಲೇ ಮೇಲು–ಕೀಳು ಎಂಬಿತ್ಯಾದಿ ಕಲಿಯುವುದಕ್ಕಲ್ಲ. ಹಾಗೆ ನೋಡಿದರೆ, ಮೂಲದಲ್ಲಿ ಎಲ್ಲವೂ ಒಂದೇ ಆಗಿದ್ದ ಪ್ರದರ್ಶಕ ಕಲೆಗಳು ಕಾಲಾಂತರದಲ್ಲಿ ದೇಶ, ಭಾಷೆ, ಸಂಸ್ಕೃತಿಗಳಿಂದ ಪ್ರಭಾವಿಸಲ್ಪಟ್ಟು ವಿವಿಧ ಚೌಕಟ್ಟುಗಳನ್ನು, ರೂಪುರೇಷೆಯನ್ನು ಪಡೆಯಿತು. ವಿಭಿನ್ನ ಕಾಲಘಟ್ಟಗಳಲ್ಲಿ, ವಿವಿಧ ವಸ್ತುಸ್ಥಿತಿಗಳಲ್ಲಿ ಪ್ರತಿಯೊಂದು ಕಲೆಯೂ ಮತ್ತೊಂದರಿಂದ ಪ್ರಭಾವಿಸಲ್ಪಟ್ಟವೇ ಆಗಿದೆ. ಅದು ರಚನೆಯಲ್ಲಾಗಲೀ, ಪುನರುತ್ಥಾನದಲ್ಲಾಗಲೀ, ಬೆಳವಣಿಗೆಯಲ್ಲಾಗಲೀ ಇರಬಹುದು. ಹಾಗಿದ್ದಾಗ ಮೂಲದಲ್ಲಿ ಎಲ್ಲವೂ ಒಂದೇ ಆಗಿದ್ದ ವಿವಿಧ ಶೈಲಿಗಳು, ಪ್ರಕಾರಗಳನ್ನು ಕೀಳ–ಮೇಲ್ಮಟ್ಟ ಎಂಬ ಅಂತರದಲ್ಲಿ ನೊಡುವ ಕ್ರಮ ಹಿತವೇ? ಎಲ್ಲವೂ ನಾಟ್ಯಶಾಸ್ತ್ರದ ಆಧಾರದಲ್ಲೇ ರಚನೆಗೊಂಡಿದೆಯೆಂದಾದ ಮೇಲೆ ಅರಿವಿನ ವಿಸ್ತರಣೆಯಲ್ಲಿ ಈ ಬೇಧ ಏತಕ್ಕೆ?

ಅವರವರ ಅಭಿರುಚಿಗೆ ತಕ್ಕಂತೆ ಅವರವರ ದೃಷ್ಟಿ ; ನಿಜ. ಆದರೆ ಅಂತಹ ವೈಯಕ್ತಿಕ ದೃಷ್ಟಿಕೋನಗಳನ್ನು ಸಾರ್ವತ್ರೀಕರಿಸುವ ಮನಸ್ಸೇ ಸಾಂಸ್ಕೃತಿಕ ರಂಗದ ದೊಡ್ಡ ಅಪಾಯ ! ನಮ್ಮದೆನಿಸಿಕೊಂಡ ಕಲೆಯೆಡೆಗೆ ಪ್ರೀತಿ, ಇತರ ವಿಷಯಗಳಲ್ಲಿ ಗೌರವ ಅಪೇಕ್ಷಣೀಯವಲ್ಲವೇ?

ಈ ನಿಟ್ಟಿನಲ್ಲಿ ನೂಪುರ ಭ್ರಮರಿ ಕೇವಲ ಭರತನಾಟ್ಯಕ್ಕಾಗಿ ಮಾತ್ರ ಮೀಸಲಾದ ಪತ್ರಿಕೆಯಲ್ಲ ಎಂಬುದು ನಮ್ಮ ಪರಿಚಯದಿಂದಲೇ ನಿಮಗೆ ವೇದ್ಯವಾದದ್ದು ನಮ್ಮ ಪುಣ್ಯ

ಯಾವುದೇ ಒಂದು ಕಲೆ ಇನ್ನೊಂದು ಕಲೆಯ ಅಂಶಗಳನ್ನು ನುಂಗಿ ಹಾಕಬಲ್ಲುದು ಅಂತಾದರೆ ಅದು ಆ ಕಲಾಪ್ರಕಾರದ ಸತ್ವಕ್ಕೆ ಸಂಬಂಧಿಸಿದ ಸವಾಲು ಮತ್ತು ಅಸ್ತಿತ್ವದ ಪ್ರಶ್ನೆ. ಅಷ್ಟಕ್ಕೂ ಭರತನಾಟ್ಯದಂತಹ ಕಲೆ ಅಂತಹ ಅನಪೇಕ್ಷಿತ ಬೆಳವಣಿಗೆಯನ್ನು ಬಯಸದೇ ಇದ್ದರೂ ಗುರು–ಕಲಾವಿದರ ಈ ಪೂರ್ವಾಗ್ರಹಗಳು ಪರಸ್ಪರ ಕಲೆಗಳಲ್ಲಿ ಬೆಳೆಯಬಹುದಾದ ಆದರಣೀಯ ಅಂಶಗಳನ್ನು ನುಂಗಿ ಹಾಕುತ್ತದೆ. ಕ್ರಮೇಣ ಇಂತಹ ಆಘಾತಗಳೇ ದಶಕಗಳುದ್ದಕ್ಕೂ ಮುಂದುವರಿದರೆ ಮತ್ತೊಂದು ಕಲೆಯೆಡೆಗೆ ನೊಡುವ ಭವಿಷ್ಯದ ಮನಸ್ಸುಗಳೂ ಕಳಂಕಗೊಳ್ಳುತ್ತವೆ. ಮುಂದೊಮ್ಮೆ ಕಲೆಗೆ ಜನರ ಮನಸ್ಸುಗಳೇ ಕಳಂಕದ ಹಣೆಪಟ್ಟಿ ಅಂಟಿಸಿದರೂ ಆಶ್ಚರ್ಯವಿಲ್ಲ. ಇದು ಕೇವಲ ಕಲೆಗಳಿಗೆ ಮಾತ್ರವಲ್ಲದೆ ಶಿಕ್ಷಣದಲ್ಲೂ ನಾವಿಂದು ಮಾಡುವ ಒಂದೊಂದು ತಪ್ಪು ಮುಂದೊಂದು ದಿನ ಹೂಳಲೂ ಆಗದ ಅನಾಥ ಪ್ರೇತಗಳಾಗಿ ತೆವಳುತ್ತವೆ..ಎಚ್ಚರ!


ಪ್ರೀತಿಯಿಂದ,

✍ ಸಂಪಾದಕರು





# ನುಡಿ–ನಮನ–ಅಂಜಲಿ




ಇತ್ತೀಚೆಗೆ ತಾನೇ ಯಕ್ಷರಂಗದ ದಿಗ್ಗಜ ಶಂಭು ಹೆಗಡೆ ರಂಗದಿಂದ ಗೆಜ್ಜೆ ಕಟ್ಟಿಕೊಂಡೇ ವಿದಾಯ ಹೇಳಿದ ಘಟನೆ  ಇನ್ನೂ ಮಾಸಿಲ್ಲ. ಅದಾಗಲೇ ಹಿಮ್ಮೇಳದ ಕಲಾವಿದರ ಪೈಕಿ ಅದ್ವಿತೀಯರೆನಿಸಿಕೊಂಡಿದ್ದ ಮತ್ತೊಬ್ಬ ಚೇತನ ಅವರ ಹಾದಿಯನ್ನೇ ಹಿಡಿದಿದ್ದಾರೆ. ಅಂತೂ ವರುಷಾರ್ಧಕ್ಕೆ ರಂಗದ ಜೊತೆ ಅವಿನಾಭವ ಸಂಬಂಧ ಹೊಂದಿದ ಈರ್ವರು ಯಕ್ಷಗಾರುಡಿಗರನ್ನು ಕಳೆದುಕೊಂಡಂತಾಗಿದೆ. ಅವರೇ ಚೆಂಡೆ ಮದ್ದಳೆ ಮಾಂತ್ರಿಕರಾಗಿ, ಯಕ್ಷಗಾನ ಪ್ರತಿಭೆಗಳನ್ನೂ ರೂಪಿಸಿದ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರು.

ಏಪ್ರಿಲ್ 27, 2009. ಸೋಮವಾರ ಬೆಂಗಳೂರಿನ ಕೋರಮಂಗಲದಲ್ಲಿ ಯಡನೀರು ಮೇಳವು ಯಕ್ಷಗಾನ ಆಟವನ್ನು ಆಯೋಜಿಸಿತ್ತು. ಪ್ರಸಂಗ ಜಾಂಬವತಿ ಕಲ್ಯಾಣ. ಚೌಕಿ ಪೂಜೆಯಾಗುತ್ತಿದ್ದಂತೆ ಹೃದಯಾಘಾತದಿಂದ ಕುಸಿದರು. ತಕ್ಷಣವೇ ಆಸ್ಪತ್ರೆಗೆ

**ಜನನ :**

**1928 ರ ಎಪ್ರಿಲ್ 2 ಕಾಸರಗೋಡು ಜಿಲ್ಲೆಯ ಬಾಯಾರು ಸಮೀಪದ ಚಿಪ್ಪಾರು**

**ವಿಟ್ಲ ರಾಜಮನೆತನದಲ್ಲಿ ಜನಿಸಿದರೂ ಕಡು ಬಡತನದ ಜೀವನ.**

**ತಂದೆ :**

**ಮರಿಮಯ್ಯ ಬಲ್ಲಾಳ್, ಮದ್ದಳೆ ವಾದಕರು.**

**ಶೈಕ್ಷಣಿಕ ವಿದ್ಯಾಭ್ಯಾಸ : 6ನೇ ತರಗತಿ**

**ಗುರುಗಳು : ತಾಳ್ತಜೆ ಕೇಶವ ಭಟ್, ಮಾಂಬಾಡಿ ನಾರಾಯಣ ಭಾಗವತರು, ಕುದ್ರಕೋಡ್ಲು ರಾಮಭಟ್, ನಿಡ್ಲೆ ನರಸಿಂಹ ಭಟ್, ವಿದ್ವಾನ್ ಬಾಬು ರೈ, ಕುರಿಯ ವಿಠಲ ಶಾಸ್ತ್ರಿಗಳು**

**ಆರಂಭಿಕ ಕಲಾ ಸೇವೆ : ಮೂಲ್ಕಿ ಮೇಳ ಧರ್ಮಸ್ಥಳ ಮೇಳದಲ್ಲಿ ನಿರಂತರವಾಗಿ 50 ವರ್ಷಗಳ ಕಾಲ ಸೇವೆ.**

**ಕುಟುಂಬ : ಪತ್ನಿ ಮತ್ತು ಮೂವರು ಪುತ್ರರು. ಪುತ್ರ ಮರಿಮಯ್ಯ ಬಲ್ಲಾಳರು ಕಟೀಲು ಶ್ರೀ ದುರ್ಗಾ ಪರಮೇಶ್ವರೀ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಕಲಾವಿದರು.**

**ಪ್ರಶಸ್ತಿಗಳು: ಕರ್ನಾಟಕ ಜನಪದ ಪ್ರಶಸ್ತಿ, ಕೇರಳ ಅಕಾಡೆಮಿ ಪ್ರಶಸ್ತಿ, ಶೇಣಿ ಪ್ರಶಸ್ತಿ**

ಕರೆದೊಯ್ಯಲಾಯಿತಾದರೂ ಮಾರ್ಗ ಮಧ್ಯೆಯೇ ಕೊನೆಯುಸಿರೆಳೆದರು. ಕಲೆಯನ್ನೇ ಬದುಕ ಗುರಿಯಾಗಿಸಿದ ಕಲಾವಿದನಿಗೆ ಇದಕ್ಕಿಂತ ಅರ್ಹ ವಿದಾಯ ಮತ್ತೊಂದಿಲ್ಲ..

ಹಾಗೆ ನೋಡಿದರೆ ಚಿಪ್ಪಾರರಿಗೆ ಬೆಳಗ್ಗೆಯೂ ಒಮ್ಮೆ ಹೃದಯಾಘಾತವಾಗಿತ್ತು. ಆದರೆ, ಅವರನ್ನು ಪರಿಶೀಲಿಸಿದ ವೈದ್ಯರು ಯಾವುದೇ ಅಪಾಯವಿಲ್ಲ ಎಂದಿದ್ದರು. ಆದರೂ ತಮ್ಮ ಅನಾರೋಗ್ಯದಲ್ಲೇ ಕಲಾಕಾಯಕ ಮಾಡಲು ಬಂದರೆಂದರೆ ಇಹಲೋಕ ಯಾತ್ರೆಗೆ ಹೆಜ್ಜೆ ಇಟ್ಟದ್ದು ದೈವ ಪ್ರೇರಣೆಯಿಂದಲೇ ಇರಬೇಕು.

ಧರ್ಮಸ್ಥಳ ಮೇಳದ ಆಟವನ್ನು ನೋಡುತ್ತಾ ಬೆಳೆದವರಿಗೆ ಚೆಂಡೆ ಎಂದರೆ ಮೊದಲು ಕಣ್ಣೆದುರಿಗೆ ಬರುವವರೇ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರು. ಇವರು ಪೀಠಿಕೆಗೆ ನಿಂತರೆಂದರೆ ಆ ಉರುಳಿಕೆಗಳನ್ನು ಕೇಳುವುದೇ ಕಿವಿಗಳಿಗೆ ಹಬ್ಬ ! ಚೆಂಡೆ ಮದ್ದಲೆಗಳ ಮೇಲೆ ಅಸಾಧಾರಣ ಪ್ರಭುತ್ವ ಹೊಂದಿದ್ದ ಬಲ್ಲಾಳರು ತೆಂಕು ತಿಟ್ಟಿನ ಎಲ್ಲ ಪ್ರಖ್ಯಾತ ಭಾಗವತರುಗಳಿಗೆ ಸಾಥ್ ನೀಡಿದವರು. ಹೆಸರಾಂತ ಕಲಾವಿದರಿಂದ ತೊಡಗಿ ಇತ್ತೀಚಿನ ಯುವ ಕಲಾವಿದರನ್ನು ಕುಣಿಸಿದ ಇವರ ಕೈ ಕಸುವು; ಕಲೆಯ ಬಗೆಗಿದ್ದ ಅವಿರತ ಶ್ರದ್ಧೆ, ಪ್ರೀತಿಗೆ ಸಾಕ್ಷಿ. ಜೋಡಾಟದಲ್ಲಂತೂ ಇವರದ್ದು ಎತ್ತಿದ ಕೈ.

ಚಿಪ್ಪಾರರ ಚೆಂಡೆ ವಾದನಕ್ಕೆ ಎಂತಹ ಅರಸಿಕನೂ ಶಹಬ್ಬಾಸ್ ಎನ್ನಬೇಕು ! 80ರ ಇಳಿವಯಸ್ಸಿನಲ್ಲೂ ಚಿಪ್ಪಾರರದ್ದು 20







ಜೀವನದ ಕೊನೆಯ ಚೆಂಡೆ ವಾದನದಲ್ಲಿ ಚಿಪ್ಪಾರು ; ಏಪ್ರಿಲ್ 27,2009 ರಂದು

ಯುವಕರೂ ನಾಚುವ ಶ್ರಮ. ಅವರು ಚೆಂಡೆ ಹಿಡಿದು ರಂಗಸ್ಥಳಕ್ಕೆ ಪ್ರವೇಶಿಸಿದರೆಂದರೆ ಪ್ರೇಕ್ಷಕರು ತನ್ಮಯ. 1958ರಲ್ಲಿ ರಷ್ಯಾ ಅಧ್ಯಕ್ಷರ ಭಾರತ ಪ್ರವಾಸ ವೇಳೆ ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿತ್ತು. ಚಿಪ್ಪಾರರ ಚೆಂಡೆ ವಾದನ. ರಷ್ಯಾ ಅಧ್ಯಕ್ಷರು ಚೆಂಡೆ ವಾದನ ಕೇಳುವುದರಲ್ಲೇ ಮೈಮರೆತಿದ್ದರು!

ದಾಮೋದರ ಮಂಡೆಚ್ಚರ ಪದ್ಯಗಳಿಗೆ ಮೃದಂಗದ ಪೆಟ್ಟುಗಳನ್ನು ಚೆಂಡೆ ಮದ್ದಳೆಗಳಿಗೆ ಅಳವಡಿಸಿದ ಕೀರ್ತಿ ಇವರದ್ದು. ಅವರದ್ದು ಗಳಸ್ಯ ಕಂಠಸ್ಯ ಸ್ನೇಹ. ಕಡತೋಕ–ಬಲ್ಲಾಳರ ಜೋಡಿಯಂತೂ ಯಕ್ಷರಂಗ ಕಂಡ ಅವಿಸ್ಮರಣೀಯ ಸಾಂಗತ್ಯ. ಇಂದಿನ ದಿನಗಳಲ್ಲಿ ಹಲವು ಕಲಾವಿದರು ತಮ್ಮೊಳಗೆ ಮಾತನಾಡಿಕೊಂಡೋ, ಸನ್ನೆ ಮಾಡಿಕೊಂಡೇ, ನಗುತ್ತಲೋ ಇರುವಾಗ ಚಿಪ್ಪಾರರು 'ಗಜ ಮುಖದವಗೆ'ಯಿಂದ ತೊಡಗಿ ಕೊನೆಗೆ ಮಂಗಳದವರೆಗೆ ನಿರಂತರವಾಗಿ ಸದಾ ಸ್ಥಿತಪ್ರಜ್ಞರಾಗಿ ಚೆಂಡೆ, ಮದ್ದಲೆ ವಾದನ ಮಾಡಿದ ದಿನಗಳು ಅದೆಷ್ಟೋ! ಅವರ ವರ್ತನೆಯಂತೆಯೇ ಚೆಂಡೆ–ಮದ್ದಳೆಗಳ ಜೊತೆಗಿನ ನಿಲುವೂ ಕೂಡಾ ಆಹ್ಲಾದಮಯ. ದೂರದರ್ಶನದಲ್ಲಿ ಪ್ರಪ್ರಥಮ ಪ್ರದರ್ಶನ ನೀಡಿದ ಕೀರ್ತಿ ಚಿಪ್ಪಾರರದ್ದು.

ತಮಗೆ ಮಾತ್ರವಲ್ಲ ತಮ್ಮ ಪುಟ್ಟ–ಪುಟ್ಟ ಊರಿಗೂ ಜಗದಗಲದ ಮಾನ್ಯತೆ, ಸಾಕಷ್ಟು ಹೆಸರು ತಂದುಕೊಡುವ ಕಲಾವಿದರ ಪೈಕಿ ಯಕ್ಷಗಾನ ಕಲಾವಿದರದ್ದು ಅಗ್ರಪಂಕ್ತಿ. ಹಾಗಾಗಿಯೇ ಎಷ್ಟೋ ಬಾರಿ ಅವರ ಹೆಸರಿಗಿಂತ ಊರಿನ ಹೆಸರನ್ನೇ ಕರೆದು ಗುರುತಿಸುತ್ತಾರೆ. ಅಂತೆಯೇ ಕೃಷ್ಣಯ್ಯ ಬಲಾಳರೂ ಕೂಡ ! ಚಿಪ್ಪಾರು ಎಂಬ ಊರಿನ ಹೆಸರಿಗೆ ಯಕ್ಷಗಾನ ಸಾರಸ್ವತ–ಸಾಂಸ್ಕೃತಿಕ ಲೋಕದಲ್ಲಿ ಶಾಶ್ವತ ಹೆಸರನ್ನು, ಸ್ಥಾನವನ್ನು ಕೊಟ್ಟು ಹೋಗಿದ್ದಾರೆ. ■

*ಸಂಚಿಕೆಗಾಗಿ ಸಹಕರಿಸಿದವರು*

**ರಾಧಾಕೃಷ್ಣ ನೃತ್ಯ ನಿಕೇತನ**

ಉಡುಪಿ– ಭರತನಾಟ್ಯ ಹಾಗೂ ಕೂಚಿಪುಡಿ ನೃತ್ಯ ಶಿಕ್ಷಣ ಸಂಸ್ಥೆ,
ಕಲಾರ್ಪಣ, ವಾದಿರಾಜ ರಸ್ತೆ, ಉಡುಪಿ
ಮೊಬೈಲ್ ಸಂಖ್ಯೆ :9945210840, 0820–2528300,

ನೃತ್ಯ ನಿರ್ದೇಶಕಿ : ನೃತ್ಯ ವಿದುಷಿ ಶ್ರೀಮತಿ ವೀಣಾ ಎಂ. ಸಾಮಗ

# ಪದ್ಮಕೋಶ ಹಸ್ತ



## ಹಸ್ತ ಮಯೂರಿ

**(ವಿ.ಸೂ : ಹಸ್ತ ವಿನಿಯೋಗದಲ್ಲಿ ಕಂಡುಬರುವ ಅಂಶಗಳು ನಂದಿಕೇಶ್ವರನ ಅಭಿನಯ ದರ್ಪಣದಿಂದಲೂ, ಇತರೆ ವಿನಿಯೋಗಗಳು ನೃತ್ಯ ಶಾಸ್ತ್ರಕ್ಕೆ ಸಂಬಂಧಿಸಿದ ನಾಟ್ಯಶಾಸ್ತ್ರ, ಸಂಗೀತ ರತ್ನಾಕರ, ನರ್ತನ ನಿರ್ಣಯ, ಲಾಸ್ಯ ರಂಜನ, ಸಾರ ಸಂಗ್ರಹ, ಹಸ್ತ ಮುಕ್ತಾವಳಿ, ಹಸ್ತ ರತ್ನಾವಳಿ,ಭರತಾರ್ಣವ, ಭರತಸಾರ, ಪತಂಜಲಿ ಯೋಗ ಶಾಸ್ತ್ರ ಮುಂತಾದವುಗಳಿಂದ, ಸಂಶೋಧನೆಗಳಿಂದ ಉಲ್ಲೇಖಿತ.)**

**ಲಕ್ಷಣ:** ಎಲ್ಲ ಬೆರಳುಗಳನ್ನು ವಿರಳವಾಗಿ ಮಾಡಿ ಬೆರಳುಗಳ ತುದಿಯನ್ನು ಸ್ವಲ್ಪವಾಗಿ ಮಡಿಸಿ ಒಂದಕ್ಕೊಂದು ಸೇರುವಂತೆ, ಧನುಸ್ಸಿನಂತೆ ಬಗ್ಗಿಸಿದರೆ ಪದ್ಮಕೋಶ ಎಂದರೆ ಕಮಲದ ಮೊಗ್ಗು, ಅಥವಾ ಪೂರ್ಣವಾಗಿ ಅರಳದ ಕಮಲ ಎಂದರ್ಥ. ದಿನನಿತ್ಯ ಜೀವನದಲ್ಲಿ ಉಗುರು ಸೂಚಿಸಲು, ಚಿಕ್ಕದು ಎನ್ನಲು, ಗುಂಡಗಿರುವುದು, ಚೆಂಡು, ಊಟ ಮಾಡುವಾಗ ಮುಂತಾದವುಗಳ ಸಂವಹನ ಮಾಡಲು ಉಪಯೋಗಿಸಲಾಗುವುದು. **ಮಣಿಪುರಿ ನೃತ್ಯದಲ್ಲಿ ಈ ಹಸ್ತಕ್ಕೆ ಶಾರ್ದೂಲಸ್ಯವೆಂದೂ ಕರೆಯುತ್ತಾರೆ.**

**ಪದ್ಮಕೋಶವನ್ನು ಹೋಲುವ ಮತ್ತೊಂದು ಅಸಂಯುತ ಹಸ್ತವಿದೆ. ಅದೇ ಕದಂಬ ಹಸ್ತ.** ಇದರಲ್ಲಿ ಐದು ಬೆರಳುಗಳ ತುದಿಗಳನ್ನು ಸೇರಿಸಿ ಹಿಡಿಯುತ್ತಾರೆ. ಸಾಮಾನ್ಯವಾಗಿ ಪದ್ಮಕೋಶದ ವಿನಿಯೋಗಗಳನ್ನು ಇಲ್ಲಿ ಉಪಯೋಗಿಸಬಹುದು. ಹಸ್ತ ಮುಕ್ತಾವಳಿಯಲ್ಲಿ ಇದು ಉಲ್ಲೇಖಿತವಾಗಿದೆ.

**ವಿನಿಯೋಗ:** ಬಿಲ್ವ ಮತ್ತು ಬೇಲದ ಹಣ್ಣುಗಳು, ಸ್ತನಗಳು, ವರ್ತುಲ (ಗುಂಡಗೆ), ಚೆಂಡಿನಿಂದ ಆಡುವುದು, ಕುಡಕೆ (ಭರಣಿ), ಊಟ ಮಾಡುವುದು, ಹೂವಿನ ಮಧ್ಯಭಾಗ, ಮಾವಿನ ಹಣ್ಣು, ಹೂಮಳೆ, ಹೂಗುಚ್ಛ, ಜಪಭಾವವನ್ನು ಸೂಚಿಸುವುದು, ಘಂಟಾರೂಪವನ್ನು ತೋರಿಸುವುದು, ಹುತ್ತ, ನೈದಿಲೆ, ಮೊಟ್ಟೆ, ಅಲಂಕಾರ ಭೂಷಣ. ನಾರಂಗಿವೃಕ್ಷ.

**ಇತರೆ ವಿನಿಯೋಗ:** ಮಿಂಚು, ಗಿರಿಕರ್ಣಿಕಾ ಪುಷ್ಪ, ರೆಂಬೆ ಬಗ್ಗಿರುವುದು, ಚಿನ್ನದ ಪಾತ್ರೆ, ಚಕೋರ ಪಕ್ಷಿ, ಯಜ್ಞಗಳಲ್ಲಿಯ ಆಮಿಷ, ದೇವತೆಗಳ ಪೂಜೆಗಾಗಿ ಕೊಡುವ ಬಲಿ, ಅಗ್ರಪಿಂಡ, ಹೂಗಳನ್ನು ಚೆಲ್ಲುವುದು, ಗಡ್ಡಧಾರಿ, ಕಾಣಿಕೆ, ತಟ್ಟೆ, ಪಿಂಡ, ನೈದಿಲೆ, ೫ ತಲೆಹಾವು, ಕಲ್ಲೆಸೆಯುವುದು, ಪಾರ್ವತಿ–ಚಾಮುಂಡಿಯರೇ ಮೊದಲಾದ ದೇವಿಯರ ದರ್ಶನ.





ಪದ್ಮಕೋಶ ಹಸ್ತವನ್ನು ಕಂಪಿಸುತ್ತಲೇ ಕೆಳಕ್ಕೆ ಹಿಡಿಯುವುದು ಸಪ್ತ ಸ್ವರಗಳಲ್ಲಿ ಒಂದಾದ ನಿಷಾದದ ಸಂಕೇತ. ಪದ್ಮಕೋಶಹಸ್ತವನ್ನು ಸಣ್ಣಗೆ ಅಲ್ಲಾಡಿಸುವುದು ೨೭ ನಕ್ಷತ್ರಗಳ ಪೈಕಿ ಒಂದಾದ ವಿಶಾಖಾ ಎಂತಲೂ, ಪದ್ಮಕೋಶವನ್ನು ಕೆಳಮುಖವಾಗಿ ಹಿಡಿಯುವುದು ಜ್ಯೇಷ್ಠ ನಕ್ಷತ್ರವೆಂದೂ, ಪದ್ಮಕೋಶ ಹಸ್ತಗಳನ್ನು ಬೆಸೆದು ಹೆಬ್ಬೆರಳು ಮತ್ತು ಕಿರುಬೆರಳನ್ನು ಜೋಡಿಸುವುದು ಕುಂಭರಾಶಿಯೆಂದೂ, ಪದ್ಮಕೋಶಗಳನ್ನು ಸ್ವಸ್ತಿಕವಾಗಿರಿಸುವುದು ಪುಗ ವೃಕ್ಷದ ಸಂಕೇತವೆಂದೂ ಅರ್ಥೈಸಲಾಗಿದೆ. ಎಡಕೈಯಲ್ಲಿ ಪದ್ಮಕೋಶವನ್ನು ಕೆಳಮುಖವಾಗಿ ಹಿಡಿದು, ಬಲಗೈಯಲ್ಲಿ ಪತಾಕವನ್ನು ಅದರ ಹಿಂದೆ ಹಿಡಿಯುವುದು ಕರಡಿ ಎಂದು ಸೂಚಿಸುತ್ತದೆ. ಸಂಕರ ಹಸ್ತ ವಿಭಾಗದಲ್ಲಿ ಪದ್ಮಕೋಶವನ್ನು ಮೇಲ್ಭಾಗದಲ್ಲಿ ಹಿಡಿದರೆ ಚಂದ್ರನೆಂದು ಅರ್ಥ.

**ಕಥಕ್ಕಳಿಯಲ್ಲಿ ಪದ್ಮಕೋಶವನ್ನು ಊರ್ಣನಾಭವೆಂದು ಕರೆಯುವುದು ವಾಡಿಕೆ.** ಊರ್ಣನಾಭ ಎಂದರೆ ಜೇಡರ ಹುಳು ಎಂದರ್ಥ.. ಪದ್ಮಕೋಶದ ಎಲ್ಲಾ ಬೆರಳುಗಳನ್ನು ಇನ್ನೂ ಸ್ವಲ್ಪ ಅಂಗೈಯೊಳಗೆ ಬಾಗಿಸುವುದೇ ಊರ್ಣನಾಭ.

**ಊರ್ಣನಾಭದ ವಿನಿಯೋಗ:** ಕೂದಲಿನಲ್ಲಿ ಹೇನುಗಳಿದ್ದರೆ ತುರಿಸಿಕೊಳ್ಳುವುದು, ಜಿಂಕೆಯ ಮುಖ, ಕಪಿ, ಸಿಂಹ, ಕೂರ್ಮ, ತಲೆಯನ್ನು ಕೆರೆದುಕೊಳ್ಳುವುದು, ಕಳ್ಳತನ, ಆಮೆ, ಸ್ತನಗಳು, ಕ್ಷತ್ರಿಯ,ಜಾತಿ, ಕಲಶ, ಜೇಡರಹುಳು, ಕೂದಲು ಹಿಡಿಯುವುದು, ರಕ್ತಕೆಂಪು ಕರ್ಣಿಕಾರ ಹೂ, ತಲೆಬಾಚುವುದು, ಪಂಜವುಳ್ಳ ಮೃಗಗಳು, ನರಸಿಂಹಾವತಾರ, ಕುಷ್ಠ. **ಯಕ್ಷಗಾನದಲ್ಲಿ ಕ್ರೂರಮೃಗಗಳು, ರೌದ್ರರಸಕ್ಕೆ ಉಪಯೋಗಿಸುತ್ತಾರೆ**. ನಿತ್ಯಜೀವನದಲ್ಲಿ ಭಯಂಕರ, ಕ್ರೂರ, ಕುಷ್ಠ, ಹುಳ, ಕಿರಿಕಿರಿ, ತಲೆಕೆರೆತ ಇತ್ಯಾದಿಗೆ ಬಳಸುತ್ತಾರೆ.

**ನಾಟ್ಯಶಾಸ್ತ್ರದಲ್ಲಿ ಉಲ್ಲೇಖಿತವಾದವಾದ ನೃತ್ತ ಹಸ್ತಗಳ ಪೈಕಿ ನಳಿನೀ ಪದ್ಮಕೋಶ**ವೆಂಬ ಹಸ್ತವಿದೆ. ಪದ್ಮಕೋಶ ಹಸ್ತಗಳನ್ನು ವ್ಯಾವೃತ್ತ (ಪಾರ್ಶ್ವಗಳಲ್ಲಿ ಕೈಗಳನ್ನು ಮೇಲಕ್ಕೆತ್ತುವುದು) ಮತ್ತು ಪರಿವರ್ತಿತ(ನಾಟ್ಯಕಾಲದಲ್ಲಿ ಪಾರ್ಶ್ವಗಳಿಂದ ಹಸ್ತಗಳನ್ನು ಮುಂಭಾಗಕ್ಕೆ ತರುವುದು) ವಾಗಿ ತಿರುಗಿಸಿ ಸುತ್ತು ಹಾಕಿಸುವುದೇ ಇದರ ಲಕ್ಷಣ.

**ನಳಿನೀ ಪದ್ಮಕೋಶದ ವಿನಿಯೋಗ:** ನಾಗಬಂಧ, ಮೊಗ್ಗು, ಸಮನಾಗಿ, ಹಂಚುವುದು, ಹೂಗೊಂಚಲು, ಹತ್ತು ಎನ್ನುವುದಕ್ಕೆ ಮತ್ತು ಗಂಡಭೇರುಂಡ ಪಕ್ಷಿ. ■

---




*ಸಂಚಿಕೆಗಾಗಿ ಸಹಕರಿಸಿದವರು*

**ಉಳ್ಳಾಲ ಮೋಹನ ಕುಮಾರ್**

ಹಿರಿಯ ನೃತ್ಯ ಗುರು, ನಾಟ್ಯನಿಕೇತನ, ಕೊಲ್ಯ, ಮಂಗಳೂರು.



ದೀವಟಿಗೆ 1

# ಶಾಸ್ತ್ರೀಯ ನೃತ್ಯಗಳ ಆಂಗಿಕಾಭಿನಯ ಪ್ರಾತ್ಯಕ್ಷಿಕೆ: ಯಕ್ಷ ಅನೌಚಿತ್ಯದ ನಡುವೆ ಬೆಳಗಿದ ಕಥಕ್ಕಳಿ

● **ಜಿ. ಎನ್ ಅಶೋಕವರ್ಧನ,** 'ಅತ್ರಿ', ಮಂಗಳೂರು.

ಆದಿತ್ಯವಾರ ೨೯–೩–೨೦೦೯ ಕಿನ್ನಿಗೋಳಿಯಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಆಂಗಿಕಾಭಿನಯ ಅವಲೋಕನಕ್ಕೆ ಮೀಸಲಿಟ್ಟಿತ್ತು. ನನಗೆ ಆಮಂತ್ರಣ ಬಂದ ಕೂಡಲೇ ಮೊದಲು ನನ್ನ ಕಣ್ಣೋಡಿದ್ದು ಸಂಪನ್ಮೂಲ ವ್ಯಕ್ತಿ ಅಥವಾ ಸಂಸ್ಥೆ ಮತ್ತು ಪ್ರಾತ್ಯಕ್ಷಿಕೆಗಳ ವಿವರಗಳತ್ತ. ಎಲ್ಲಾ ಅನುದಾನಿತ ಸಂಸ್ಥೆಗಳು ಮಾಡುವಂತೆ ಇಲ್ಲೂ ಮುಖ್ಯ ಕೆಲಸವನ್ನು 'ಉಳಿದ ಸಮಯಕ್ಕೆ ಸಂಕೋಚಗೊಳ್ಳುವಂತೆ' ಭರ್ಜರಿ ಉದ್ಘಾಟನಾ ಮತ್ತು ಸಮಾರೋಪ ಸಮಾರಂಭಗಳು ಕಾಣುತ್ತಿತ್ತು; ಬೆಳಿಗ್ಗೆ ಒಂಬತ್ತರಿಂದ ಹತ್ತು (ನಿಜದಲ್ಲಿ ನಡೆದಷ್ಟು ಹೊತ್ತು) ಮತ್ತು ಸಂಜೆ ನಾಲ್ಕರಿಂದ ಐದು (ಕೂತವನ ತಾಳ್ಮೆ ಖೈದು). ಎಡೆಯಲ್ಲಿ ಊಟದ ಬಿಡುವಿನೊಡನೆ ಐದು ಪ್ರಾತ್ಯಕ್ಷಿಕೆ ನಡೆಯಬೇಕಿತ್ತು.

ಸಾರ್ವಜನಿಕ ಹಣ ವಿನಿಯೋಗದ ಆಶಯ, ಕಡತಗಳು ಮತ್ತು ಅನುದಾನಗಳು ಯಾವತ್ತೂ ಘನವಾಗಿಯೇ ಇರುತ್ತವೆ. ಆದರೆ ಹೆಚ್ಚಾಗಿ (ಇಲ್ಲೂ) ಮೆರೆಯುವುದು ನಿರುಪಯುಕ್ತ ಔಪಚಾರಿಕತೆಗಳು. ಎಲ್ಲಾ ಸಮಯವನ್ನು ಉದ್ದೇಶಿತ ಕಲಾಪಕ್ಕೆ ವಿನಿಯೋಗಿಸುವುದನ್ನು ನಾವು ರೂಢಿಸುವುದು ಯಾವಾಗ? ನೇರ ಪ್ರಾತ್ಯಕ್ಷಿಕೆಗಳನ್ನೇ ಅನಾವರಣಗೊಳಿಸುತ್ತೇನೆ.

## ೧. ಕಥಕ್ಕಳಿ

ಕೇರಳ ಕಲಾಮಂಡಲಂ (ತ್ರಿಶೂರ್) ಇದರ ಕಲಾಧರನ್ ಬಳಗ ಸಮಯ ಮಿತಿಯನ್ನು ನೋಡಿಕೊಂಡು ಬಹಳ ಚೊಕ್ಕವಾಗಿ ಕಥಕ್ಕಳಿಯ ಆಂಗಿಕಾಭಿನಯದ ಪ್ರಾತ್ಯಕ್ಷಿಕೆಯನ್ನು ಕೊಟ್ಟಿತು. ಸಾಂಪ್ರದಾಯಿಕ ಪ್ರದರ್ಶನಗಳಲ್ಲಿ ಪೂರ್ಣ ವಾಚಿಕಾಭಿನಯವನ್ನು ಹಾಡುಗಾರಿಕೆಯಲ್ಲೇ ಅಭಿವ್ಯಕ್ತಿಸಲು ಎರಡು ಭಾಗವತರಿರುತ್ತಾರಂತೆ. ಇಲ್ಲಿ ಪ್ರಾತ್ಯಕ್ಷಿಕೆಯ ಸೀಮಿತ ಆವಶ್ಯಕತೆಗನುಗುಣವಾಗಿ ಒಬ್ಬರೆ ಕೊರತೆಯಾಗದಂತೆ ನಡೆಸಿಕೊಟ್ಟರು.

ಪಕ್ಕ ವಾದ್ಯದಲ್ಲಿ ತಾಳ, ಚಂಡ (ಗಮನಿಸಿ ಚಂಡೆ ಅಲ್ಲ), ಮದ್ದಳೆಯ ಸಹಕಾರ. ಒಬ್ಬನೇ ನಟ ಸರಳ ದಿರುಸಿನಲ್ಲಿ ಪ್ರದರ್ಶನ ಭಾಗದ ಪ್ರಾತ್ಯಕ್ಷಿಕೆ ನಡೆಸಿದ. ಹಸ್ತ ಮುದ್ರೆಗಳು ಕಥಕ್ಕಳಿಯಲ್ಲಿ ಯಾವುದೋ ವಸ್ತು, ಭಾವಗಳನ್ನು ಪ್ರತಿನಿಧಿಸುವ ಶಬ್ದಗಳಿದ್ದಂತೆ. ಹಾಗಾಗಿ







ಮೊದಲು ಆ ತುಣುಕುಗಳನ್ನು ಪರಿಚಯಿಸಿದರು. ಮುಂದೆ ನವರಸಗಳನ್ನು ಅಭಿವ್ಯಕ್ತಿಸುವ ಮುಖಭಾವಗಳು. ಕೊನೆಯಲ್ಲಿ ಕೆಲವು ಪ್ರಸಂಗಗಳ ಸಣ್ಣ ಒಂದೆರಡು ಸನ್ನಿವೇಶವನ್ನು ಎತ್ತಿಕೊಂಡು, ಹೊಂದುವ ನೃತ್ತ ನೃತ್ಯಗಳ (ಮುಖಭಾವ, ದೇಹಭಾಷೆ ಸೇರಿದಂತೆ) ಜೋಡಣೆ ಮತ್ತು (ಬಣ್ಣ ತೊಡವುಗಳ ಪಾಕ ಮಾತ್ರ ಇಲ್ಲಿರಲಿಲ್ಲ) ಹಿನ್ನೆಲೆಯಿಂದ ಹೊಮ್ಮುವ ಭಾಗವತನ ಹಾಡುಗಾರಿಕೆಯಲ್ಲಿ ಜನಮನ ಸಂಪನ್ನಗೊಳಿಸಿದರು. ಒಂದೆರಡು ಪ್ರೇಕ್ಷಕರ ವಿಶೇಷ ಬೇಡಿಕೆಯ ತುಣುಕನ್ನೂ ಇವರು ಮರುಕ್ಷಣದಲ್ಲಿ ಕಿಸರು ಕೊಸರು ಇಲ್ಲದೆ ಒದಗಿಸಿದ್ದು ಕಲಾವಿದ ಬಳಗದ ಅಪಾರ ಸಿದ್ಧಿಯನ್ನು ಪ್ರಸಿದ್ಧಿಸಿತು. ಅಂದು ಈ ಪ್ರಾತ್ಯಕ್ಷಿಕೆ ಪ್ರೇಕ್ಷಕ ಚಿತ್ತಭಿತ್ತಿಯಲ್ಲಿ ಒತ್ತಿದ ಮುದ್ರೆ ಇಂದು ಕಥಕ್ಕಳಿಗೆ ಒದಗಿರುವ ವಿಶ್ವಮಾನ್ಯತೆಗೆ ಸಂದ ಕಿನ್ನಿಗೋಳಿಯ ಅನುಮೋದನೆ.

## ೨. ಭೂತಾರಾಧನೆ

ಎರಡನೇ ಅವಧಿಗೆ ಕಲಾವಿದ ಬರಬೇಕಿತ್ತು; ಆದರೆ ಸಂಘಟಕರು ಕರೆಸಿದ್ದು 'ಪಾತ್ರಿಯನ್ನು'. ಆತನಿಗೂ ಸಂಘಟಕರಿಗೂ ಅಂತಿಮ ಕ್ಷಣದವರೆಗೂ ಭೂತಾರಾಧನೆ ಕೇವಲ ಆರಾಧನೆಯೇ ಅಥವಾ ಪ್ರದರ್ಶನ ಕಲೆಯೂ ಹೌದೇ ಎಂಬ ಬಹು ಚರ್ಚಿತ ವಿಷಯ ಹೊಳೆದೇ ಇಲ್ಲವೆಂಬಂತಿದ್ದದ್ದು ಆಶ್ಚರ್ಯ. ಘೋಷಿತ ಪ್ರಬಂಧ ಸ್ಪರ್ಧೆಗೆ ಹೋದ ಅಭ್ಯರ್ಥಿಯೊಬ್ಬ "ನಾನು ಇದುವರೆಗೂ ಪ್ರವಾಸ ಹೋಗಿಲ್ಲವಾದ್ದರಿಂದ ('ಪ್ರವಾಸ ಕಥನ' ಸ್ಪರ್ಧೆಯ ವಿಷಯ) ಏನೂ ಬರೆಯುತ್ತಿಲ್ಲ" ಎಂದಂತೆಯೇ ಇದನ್ನು ಮುಗಿಸಬೇಕಾಯ್ತು! ಇದು ಬರಿಯ ಭೂತಪಾತ್ರಿಯ ಕೊರತೆಯಲ್ಲ ಎಂಬುದಕ್ಕೆ ಮುಂದಿನ ಮೂರೂ ಪ್ರಾತ್ಯಕ್ಷಿಕೆಗಳು ಸಾಕ್ಷಿಯಾದ್ದು ವಿಷಾದನೀಯ.

ಒಟ್ಟು ಕಲಾವಿದರ ಮತ್ತು ಅವರು ಪ್ರತಿನಿಧಿಸಿದ ಕಲಾಪ್ರಕಾರಗಳ ಯೋಗ್ಯತೆ ಮತ್ತು ಅನನ್ಯತೆಯ ಬಗ್ಗೆ ನಮಗ್ಯಾರಿಗೂ ಸಂದೇಹಗಳಿಲ್ಲ. ಕಲಾಪದ ಆಶಯವನ್ನು ಸಂಘಟನೆ ಸಾಕಷ್ಟು ಮುಂದಾಗಿ ಕಲಾವಿದರಿಗೆ ಸ್ಪಷ್ಟಗೊಳಿಸಿದ್ದು ಸಾಲದು ಎನ್ನುವುದು ಮುಖ್ಯ ದೋಷ. ಗೃಹಕೃತ್ಯ ಮಾಡದೇ ಏನು ಮಾಡಿದರೂ ನಡೆದೀತು ಎನ್ನುವ ಉಡಾಫೆಯ ಅಂಶಗಳು ಇನ್ನಷ್ಟು ದೊಡ್ಡ ದೋಷ. ಎರಡೂ ದೋಷಗಳನ್ನು ಮೀರಿ ನಿಂತ ಕಥಕ್ಕಳಿಯ ಯಶಸ್ಸಿನ ಪ್ರಭೆ ನಮ್ಮವರಿಗೂ ದಾರಿ ತೋರಲಿ ಎಂದು ಆಶಿಸುವುದಷ್ಟೇ ಉಳಿಯಿತು.

## ೩. ನೃತ್ಯಪ್ರಕಾರಗಳಲ್ಲಿ ಭರತನಾಟ್ಯ



ವಿದ್ಯಾ ಶಿವಲ್ಲಡ್ಕ ಬಳಗ 'ಭರತನಾಟ್ಯ'ವನ್ನು ಮುಖ್ಯವಾಗಿರಿಸಿಕೊಂಡು ಪ್ರಬಂಧಮಂಡನೆ ಮತ್ತು ಪ್ರಾತ್ಯಕ್ಷಿಕೆಯನ್ನು ಕೊಡಲು ಸಜ್ಜಾಗಿದ್ದರು. ಸಮಯದ ಮಿತಿ ನೋಡಿಕೊಂಡು ವಿಷಯದ ಪರಿಮಿತಿ ನಿರ್ಧರಿಸಬೇಕಾದವರು ಯಾರು ಎಂಬ ಗೊಂದಲ ಪ್ರದರ್ಶನದ ಕೊನೆಯಲ್ಲಿ ವಿದ್ಯಾ ಅವರ ಮಾತಿನಲ್ಲೇ ಸ್ಪಷ್ಟವಾಯ್ತು. ಭರತ, ನಂದಿಕೇಶ್ವರ, ಪದ್ಮಾಸುಬ್ರಹ್ಮಣ್ಯಂ, ಸುಂದರಿ ಸಂತಾನಂ ಮುಂತಾದವರ ವಾದ–ಪ್ರತಿವಾದಗಳ ಸಂತೆಯಲ್ಲಿ ದಾರಿ ಬಿಡಿಸಿಕೊಳ್ಳುತ್ತಿದ್ದ ವಿದ್ಯಾರನ್ನು ನಿರ್ವಹಣೆಯ ಹೊಣೆ ಹೊತ್ತ ಎಂ.ಎಲ್ ಸಾಮಗರು ಹೇಗೋ ಪ್ರಾತ್ಯಕ್ಷಿಕೆಯ ವೇದಿಕೆಗೆ 'ಹಾರಿಸಿ' ತಂದರು.

ಆದರೂ ಪ್ರಾತ್ಯಕ್ಷಿಕೆಯ ಸ್ವಾರಸ್ಯ ವಿಕಸಿಸುವ ಮೊದಲು ಪ್ರೇಕ್ಷಕವರ್ಗದ ಓರ್ವರಿಂದ (ವೃತ್ತಿ ಮಾತ್ಸರ್ಯ?) ಮತ್ತೆ ಹಳೆಯ ಜಾಡಿಗೆ ನೂಕಲ್ಪಟ್ಟು ಕಲಾಪ ಅಪರಿಪೂರ್ಣವಾಯ್ತು. (ಆ ಪ್ರೇಕ್ಷಕ ಮಹಾಶಯರಿಗೆ ವಿಮರ್ಶಕನ ವಿನಯದ ಬಗ್ಗೆ ಪ್ರತ್ಯೇಕ ಪಾಠ ಅವಶ್ಯ ಆಗಬೇಕು.) ಕೊನೆಯಲ್ಲಿ ಉತ್ತರ ಕೊಡುವ ಗಡಿಬಿಡಿಯಲ್ಲಿ ಪ್ರದರ್ಶನಕ್ಕೆ ಕರೆತಂದ ಗುರುವೇ ಶಿಷ್ಯೆಯರ ಕಲಾಪದ ಬಗ್ಗೆ ಸಂಶಯ ವ್ಯಕ್ತಪಡಿಸುವಂತಾದದ್ದು ಅನಪೇಕ್ಷಿತ ಬೆಳವಣಿಗೆ.

## ೪. ತೆಂಕು ತಿಟ್ಟು

ಕೆ. ಗೋವಿಂದ ಭಟ್ಟರು ಇಂದು ತೆಂಕುತಿಟ್ಟಿನಲ್ಲಿ ವೃತ್ತಿಪರರಾಗಿರುವವರಲ್ಲಿ ಅದ್ವಿತೀಯ ಮತ್ತು ಹಿರಿಯ ಕಲಾವಿದ. ಆದರೆ ಇತರ ರಂಗಪ್ರಕಾರಗಳೊಡನೆ ತುಲನಾತ್ಮಕವಾಗಿ ಅವಲೋಕನ ನಡೆಯುತ್ತಿದ್ದ ಪ್ರಾತ್ಯಕ್ಷಿಕೆಯ ರಂಗದಲ್ಲಿ ಇವರದು ದೊಡ್ಡ ಸೋಲು. ಧರ್ಮಸ್ಥಳದಲ್ಲಿ ಯಕ್ಷ–ಶಿಕ್ಷಕನಾಗಿಯೂ ದುಡಿದ ಅನುಭವದ ಭಟ್ಟರು "ನಾನು ಯಾವುದೇ ಶಾಸ್ತ್ರದ ಉಲ್ಲೇಖ, ವಿವರಣೆಗಳ ಸಹಿತ ಪ್ರಾತ್ಯಕ್ಷಿಕೆ ಕೊಡಲಾರೆ. ಕೆಲವು ಪದ್ಯಗಳಿಗೆ ನನ್ನ ಕುಣಿತ, ಅಭಿನಯದ ಅಳವಡಿಕೆಯನ್ನಷ್ಟೇ ಪ್ರದರ್ಶಿಸುತ್ತೇನೆ. ಬೇಕಾದ್ದನ್ನು ಗ್ರಹಿಸಿಕೊಳ್ಳಿ" ಎಂದು ತೊಡಗಿದ್ದು ಅಭಾಸಕರ. ಮುಂದುವರಿದು "ಸುಮಾರು ಒಂದು ಗಂಟೆಯ ಅವಧಿಯುದ್ದಕ್ಕೆ ಇಪ್ಪತ್ತು ವರ್ಷದ ಹಿಂದೆಯಾದರೆ ಕುಣಿಯುತ್ತಿದ್ದೆ. ಇಂದು ಬಚ್ಚಿದರೆ ಐದಾರು ಮಿನಿಟು ಸುಮ್ಮನೆ ಕುಳಿತೇನು, ಸಹಿಸಿಕೊಳ್ಳಿ" ಎಂದವರೇ ಬಲಿಪ ಭಾಗವತರು ಕೊಡುತ್ತ ಬಂದ ವಿಭಿನ್ನ ಪದ್ಯಗಳಿಗೆ ಅವಿರತ ಕುಣಿಯತೊಡಗಿದರು.

ಗೋವಿಂದ ಭಟ್ಟರ ಪ್ರಾಯಕ್ಕೆ ಅಗತ್ಯವಾದ ವಿಶ್ರಾಂತಿ ಸಿಗುವಂತೆಯೂ ಪ್ರದರ್ಶನದ ಯಾಂತ್ರಿಕತೆಯನ್ನು ನಿವಾರಿಸುವಂತೆಯೂ ಸಾಮಗರು ಮಧ್ಯೆ ಪ್ರವೇಶಿಸಿ, "ನೀವು ಪ್ರದರ್ಶಿಸಲಿರುವ ಪ್ರತಿ ತುಣುಕಿನ ಮೊದಲು ಅಲ್ಲಿ ವ್ಯಕ್ತವಾಗುವ ರಸ, ಆಂಗಿಕಗಳ ಬಗ್ಗೆಯಾದರೂ ನಾಲ್ಕು ಮಾತು ಹೇಳಿ, ವಿರಾಮದಲ್ಲಿ ಕುಣಿದರೆ ಒಳ್ಳೆಯದಿತ್ತು" ಎಂದರು.







ಭಟ್ಟರು ಸರಿಯಾಗಿಯೇ ಬಿಡುವನ್ನೇನೋ ಬಳಸಿಕೊಂಡರು. ಆದರೆ ಭಾವ ನಿಲುವುಗಳ ವಿವರಣೆ ಕೊಡಬೇಕಾದಲ್ಲಿ ಪ್ರಸಂಗ, ಸನ್ನಿವೇಶವನ್ನಷ್ಟೇ ಹೇಳುತ್ತ ಮುಂದುವರಿದರು.

ಮಾಯಾ ಶೂರ್ಪನಖೆಯ ತುಣುಕನ್ನು ಮುಗಿಸಿದಾಗ ಪ್ರೇಕ್ಷಕ ಸಾಲಿನಲ್ಲಿದ್ದ ಕೋಳ್ಯೂರು ರಾಮಚಂದ್ರರಾಯರು ಒಮ್ಮೆಗೆ ಸವಾಲೊಂದನ್ನು ಎಸೆದರು. "ಸಮರೇಖೆಯಂತೆ ತೋರುವ ಮಾಯಾ ಅಜಮುಖಿಯಿಂದ ಮಾಯಾ ಶೂರ್ಪನಖೆಯನ್ನು ಹೇಗೆ ಭಿನ್ನವಾಗಿಸುತ್ತೀರಿ?" ಸಣ್ಣ ಕೊಸರಾಟ, ಹುಸಿಮುನಿಸಿನ ಬೆನ್ನಲ್ಲಿ ಕೋಳ್ಯೂರರೇ ಉತ್ತರ ಕೊಟ್ಟದ್ದಲ್ಲದೆ ಅಭಿನಯಿಸಿಯೂ ತೋರಿಸಿದ್ದು ಸ್ವಾಗತಾರ್ಹ ಬದಲಾವಣೆ ಆಯ್ತು. (ಒಮ್ಮೆಗೆ ಕೆಲವರಾದರೂ ಕೋಳ್ಯೂರರಿಗೆ 'ನನ್ನನ್ಯಾಕೆ ಕರೆಯಲಿಲ್ಲ ಎನ್ನುವ ಹೊಟ್ಟೆಕಿಚ್ಚು' ಎಂದು ಗ್ರಹಿಸಿರಬಹುದು. ಆದರೆ ಕೊನೆಯಲ್ಲಿ "ಬೇಸರ ಎಂತದ್ದು, ಕೋಳ್ಯೂರು ನನಗೆ ಯಕ್ಷನರ್ತನವನ್ನು ಕಲಿಸಿದ ಗುರು" ಎಂದದ್ದು ಮೋಡ ಕವಿದ ವಾತಾವರಣದಲ್ಲಿ ಅಪ್ಯಾಯಮಾನವಾದ ತಂಗಾಳಿಯೇ ಆಯ್ತು)


ಹಸಿವೆ ನೀಗಲು ಬಂದ ಶೂರ್ಪನಖಿ ರಾಮದರ್ಶನದಿಂದ ಕಾಮಾತುರ ಳಾಗುತ್ತಾಳೆ. ಅವಳ ಚರ್ಯೆಗಳಲ್ಲಿ ರಾಮನ ಸಂಸ್ಕಾರಕ್ಕೆ ವಿಪರೀತವಾಗದಿರುವ ಎಚ್ಚರ ಇರಬೇಕು. ಅದೇ ಅಜಮುಖಿಯಾದರೋ ಕಾಮ್ಯೈಕ ಧ್ಯಾನದಲ್ಲಿ ಒಟ್ಟಾರೆ ಪುರುಷ ನೊಬ್ಬನ ತೀವ್ರ ಹುಡುಕಾಟದಲ್ಲಿದ್ದಾಗ ಬಂದ ದೂರ್ವಾಸನ ಮೇಲೆ ಅಕ್ಷರಶಃ ಬೀಳುತ್ತಾಳೆ.

ಕೋಳ್ಯೂರು ಅಭಿನಯಕ್ಕೆ ನಿಂತಾಗ ಅಜಮುಖಿಗೆ ನಾರಾಯಣ ಭಾಗವತರು ಬಲಿಪಶೈಲಿಯಲ್ಲೇ ಪದ್ಯ ಸುರುಮಾಡಿದ್ದರು. ಪ್ರಾತ್ಯಕ್ಷಿಕೆ ಮತ್ತು ಸವಾಲಿಗುತ್ತರ ಕೊಡುವ ಎಚ್ಚರಗಳೆರಡನ್ನು ವಹಿಸಿಕೊಂಡ ಕೋಳ್ಯೂರು ತಪ್ಪ ತಡೆದರು. ಸ್ವತಃ ಹಾಡಿ, ಕೈತಟ್ಟಿ ತಾಳಹಾಕಿ 'ನಿಮ್ಮದು ಶೂರ್ಪನಖೆಗಾದೀತು, ನನ್ನ ಅಜಮುಖಿಗೆ ಇದೂ' ಎಂದು ಭಾಗವತರನ್ನು ತಿದ್ದಿದ್ದು ನಾನು ಉಲ್ಲೇಖಿಸಲೇಬೇಕು. ಆಗ ಸಾಮಗರು ಗೋವಿಂದ ಭಟ್ಟರನ್ನು ಕೆಣಕಿದರು "ಹೇಗೆ, ನಿಮ್ಮದು ಭಾಗವತಿಕೆಗೆ ತಕ್ಕ ಕುಣಿತವೋ ಅಥವಾ ನಿಮ್ಮ ರಸಭಾವಾನುಸಾರಿಯಾಗಿ ಭಾಗವತಿಕೆ ಹರಿಯಬೇಕೋ?" ಗೋವಿಂದ ಭಟ್ಟರು ನಿಜದಲ್ಲಿ ಎಷ್ಟು ದೊಡ್ಡವರಿದ್ದರೂ ಸಾರ್ವಜನಿಕದ ಪ್ರತಿರೋಧಗಳಿಗೆ ಗೋಣಗಿಯಾರೇ ವಿನಾ ಎಂದೂ ವಿರೋಧಿಸಿದವರಲ್ಲ. ಯಕ್ಷಗಾನದಲ್ಲಿ ಭಾಗವತ ಪ್ರಥಮ ವೇಷಧಾರಿ ಎನ್ನುವ ವಾದವನ್ನು ಪುರಸ್ಕರಿಸುವಂತೆ "ನನ್ನದೇನಿದ್ದರೂ ಭಾಗವತಾನುಸಾರಿ" ಎಂದು ಮುಗಿಸಿಬಿಟ್ಟರು.

## ೫. ಬಡಗುತಿಟ್ಟು

ನಾಲ್ಕೂ ಪ್ರಾತ್ಯಕ್ಷಿಕೆಗಳ ನಿರ್ವಹಣೆಯನ್ನು ಪ್ರದರ್ಶನಕ್ಕಾಗಲೀ ಪ್ರೇಕ್ಷಕರಿಗಾಗಲೀ ಹೇರಿಕೆಯಾಗದಂತೆ ನಡೆಸಿದವರು ಎಂ.ಎಲ್ ಸಾಮಗ. ಆದರೆ ಕೆರೆಮನೆ ಶಿವಾನಂದ

ಹೆಗಡೆ ಮತ್ತು ಬಳಗದ ಕೆಲಸಕ್ಕೆ ಕೆಜಿ ನಾರಾಯಣರ ನಿರ್ವಹಣೆ ಹೊರೆಯೇ ಆಯ್ತು. ಅದರಲ್ಲೂ ಅವರು ಪ್ರದರ್ಶನದ ಕೊನೆಯಲ್ಲಿ ಭಾರೀ ಮುನ್ನೆಚ್ಚರಿಕೆಯ ಮಾತುಗಳ ಆವರಣ ಕಟ್ಟಿ ("ಈಗ ನಾನೊಂದು statement ಮಾಡಲಿಕ್ಕಿದ್ದೇನೆ! ಸಭೆಯಲ್ಲಿರುವ ಗಣ್ಯಾತಿಗಣ್ಯರು ನನ್ನನ್ನು ವಿರೋಧಿಸಬಹುದು, ವೇದಿಕೆ ಬಿಟ್ಟಿಳಿದಾಗ ಜೋಶಿಯವರು ನನ್ನ ಮೇಲೆ ಧಾಳಿ ಮಾಡಬಹುದು. ಆದರೂ...... 'ಇಂದು ಯಕ್ಷಗಾನದಲ್ಲಿ ಕಲಾವಿದರಿಲ್ಲ' ಎಂದು ಹೇಳಿದ್ದು ದೊಡ್ಡ ಠುಸ್ ಪಟಾಕಿ!



ಶಿವಾನಂದ ಹೆಗಡೆ ಪ್ರತ್ಯೇಕ ನಿರೂಪಣೆಗಿಳಿದರು (ಒಂದು ಪ್ರಾತ್ಯಕ್ಷಿಕೆಗೆ ಎರಡು ನಿರ್ವಹಣೆ?). ಒಂದು ನಿಟ್ಟಿನಲ್ಲಿ ವಿದ್ಯಾ ಶಿಮ್ಲಡ್ಕರ ಹಾಗೇ ವಾದಗಳ ಮಂಡನೆಯಲ್ಲಿ ಕಾಲಕಳೆದರು. ಪ್ರದರ್ಶನಕ್ಕೆ ಇಳಿದಾಗ ಗೋವಿಂದಭಟ್ಟರು ಹಿಡಿದ ಮಾರ್ಗವನ್ನೇ ಅನುಸರಿಸಿ ಒಂದು ಪುಟ್ಟ ಪ್ರಸಂಗವನ್ನೇ (ವಾಚಿಕಾಭಿನಯವೊಂದನ್ನು ಬಿಟ್ಟು ವೇಶಭೂಷಣಸಹಿತ) ಕೊಟ್ಟದ್ದು ನಮಗೆ ನಿರಾಶಾದಾಯಕವೇ ಆಯ್ತು. ಐವತ್ತಕ್ಕೂ ಮಿಕ್ಕು ವರ್ಷಗಳ ಕೆರೆಮನೆ ಮೇಳದ ಶೈಲಿ, ಅಖಂಡ ನಾಲ್ಕನೇ ತಲೆಮಾರಿಗೂ ಹರಿಯುತ್ತಿರುವ ಯಕ್ಷವಾಹಿನಿಯ ಸಾರಾಂಶವನ್ನು ಪ್ರಾತ್ಯಕ್ಷಿಕೆಯಲ್ಲಿ ಅವಲೋಕಿಸಲು ಕಾತರರಾಗಿದ್ದೆವು. ಆದರೆ ಅವರು ಜಿ.ಆರ್.ಪಾಂಡೇಶ್ವರರ ಒಂದು ಪುಟ್ಟ ಪ್ರಸಂಗವನ್ನೇ (ದಿ। ಶಂಭು ಹೆಗಡೆಯವರ ನಿರ್ದೇಶನದ್ದಂತೆ) ಪ್ರಸ್ತುತಪಡಿಸಿದ್ದು ತೀರಾ ಅನಪೇಕ್ಷಿತ. ಎಲ್ಲ ಮುಗಿಯಿತೆನ್ನುವಾಗ ಶಿವಾನಂದ ಹೆಗಡೆಯವರು "ವಾಸ್ತವದಲ್ಲಿ ನಾನು ಪ್ರಾತ್ಯಕ್ಷಿಕೆಗಳನ್ನು ಕೊಡಬೇಕು ಎಂದೇ ಗೆಜ್ಜೆ ಕಟ್ಟಿ ಸಜ್ಜಾಗಿದ್ದೆ" ಎಂದು ಸಂಘಟಕರನ್ನು ಪರೋಕ್ಷವಾಗಿ ಹೆಚ್ಚುವರಿ ಸಮಯಕ್ಕೆ ಮಣಿಸಿ, ಅಭಿನಯಿಸಿದಾಗ ಎತ್ತನ್ನು ಗಾಡಿಯ ಹಿಂದೆ ಕಟ್ಟಿದ ಹಾಗಾಯ್ತು!

ಅಕಾಡೆಮಿ ಮಧ್ಯಾಹ್ನಕ್ಕೆ ಎಲ್ಲರಿಗೂ ಸರಳ ಆದರೆ ಅಗತ್ಯದ ಊಟದ ವ್ಯವಸ್ಥೆ ಮಾಡಿತ್ತು. ಆದರೆ ಬಡಿಸುವಲ್ಲಿ ಅವ್ಯವಸ್ಥೆ. ಊಟ ದಿನದ ವಿನಿಕೆಯ ಪ್ರತಿಬಿಂಬ – ಉದ್ದೇಶ, ಪಾಕ ಚೆನ್ನಾಗಿಯೇ ಇತ್ತು. ಬಡಿಸಿದ್ದರಲ್ಲೇ ಎಲ್ಲೋ ಐಬು! ಗಾದೆ ಮಾತು: ಮನೆಯ ಸಂಸ್ಕೃತಿಯನ್ನು ಊಟದಲ್ಲಿ ನೋಡು, ಎಷ್ಟು ನಿಜ !

**ಚಿತ್ರಗಳು : ಡಾ। ಕೃಷ್ಣ ಮೋಹನ್ ಪ್ರಭು ಮತ್ತು ಡಾ। ಮನೋಹರ ಉಪಾಧ್ಯ**

**(ಲೇಖಕರು ಚಿಂತನಶೀಲರು, ವಿಮರ್ಶಕರು, ಮಂಗಳೂರಿನ ಹೆಸರಾಂತ ಅತ್ರಿ ಬುಕ್ ಸ್ಟೋರ್‌ನ ಮಾಲೀಕರು. ಇವರ www.athree.wordpress.com ಹೆಸರಾಂತ,ಸಾಹಿತ್ಯಾಸಕ್ತರಿಗೆ ಸಮೃದ್ಧ ಬ್ಲಾಗ್ ಅಂಗಳ.)**





# ದೀವಟಿಗೆ 2 ಭರತ -ಭಾವ -ನೃತ್ಯ

**● ಕೆ. ವಿ ರಮಣ್, ಮೂಡಬಿದ್ರೆ**

**ಮಂಗಳೂರಿನ** ಭರತನೃತ್ಯ ಸಭಾ ಏರ್ಪಡಿಸುವ ಪ್ರತಿಭಾನ್ವಿತ ಸ್ಥಳೀಯ ಕಲಾವಿದರ ತಿಂಗಳ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಅರ್ಥಾ ಪೆರ್ಲ ಅವರ ಭರತನಾಟ್ಯ ನೃತ್ಯ ಪ್ರದರ್ಶನದಲ್ಲಿ ತಮ್ಮ ತಂದೆ ಡಾ. ವಸಂತಕುಮಾರ್ ಪೆರ್ಲ ಅವರ 'ಬಾ ಮಗುವೆ ಬಾ ಮಗುವೆ ಜೀವಭಾವದ ನಗುವೆ' ಎಂಬ ಭಾವಗೀತೆಗೆ ವಿಸ್ತೃತ ಅಭಿನಯ ಮಾಡಿದರು. ಹಿರಿಯ ನೃತ್ಯ ಗುರು ಕೆ.ಮುರಳೀಧರರಾಯರ ಸಂಯೋಜನೆಯಲ್ಲಿ ಮೂಡಿಬಂದ ಈ ನೃತ್ಯಭಾಗವು ಸಂಪ್ರದಾಯದ ಚೌಕಟ್ಟಿನಿಂದ ಹೊರಗೆ ಬಂದು ಭಾವಗೀತೆಯನ್ನು ಭಕ್ತಿಗೀತೆಯಂತೆ ಪ್ರದರ್ಶಿಸಿದ್ದು ಸ್ತುತ್ಯರ್ಹ.

ಇಂತಹ ಪ್ರಯೋಗಗಳು ಈಗಾಗಲೇ ಸಾಕಷ್ಟು ಯಶಸ್ವಿಯಾಗಿದ್ದರೂ ಸಾಂಪ್ರದಾಯಿಕ ನೃತ್ಯ ಪ್ರದರ್ಶನದಲ್ಲೂ ಕನ್ನಡದ ಭಾವಗೀತೆಗಳಿಗೆ ಜೀವ ತುಂಬುವ ಕಾರ್ಯಗಳು ಮತ್ತಷ್ಟು ಎಳೆ–ಯುವ–ಹಿರಿಯ ಕಲಾವಿದರಲ್ಲಿ ಮೂಡಿ ಬರಬೇಕು. ಆಗ ಕನ್ನಡದ ಸಾರಸ್ವತ, ಸಾಂಸ್ಕೃತಿಕ, ನೃತ್ಯ ಲೋಕ ಮತ್ತಷ್ಟು ತುಂಬಿಕೊಂಡು ಆಸ್ವಾದಪೂರ್ಣವಾಗುತ್ತದೆ.

**(ಲೇಖಕರು ಸೃಜನಶೀಲ ಚಿಂತಕರು, ಸಂಘಟಕರು, ಆಕಾಶವಾಣಿ ಕಲಾವಿದರು, ಸಂಗೀತ ನೃತ್ಯ ಕಲಾವಿದರು)**




*ಸಂಚಿಕೆಗಾಗಿ ಸಹಕರಿಸಿದವರು*

**ಸುದರ್ಶನ ಎಂ. ಎಲ್**

**ನೃತ್ಯ ಗುರು, ಶ್ರೀ ಶಾರದಾ ಕಲಾ ಶಾಲೆ, ದರ್ಬೆ, ಪುತ್ತೂರು**





*ಸಂಚಿಕೆಗಾಗಿ ಸಹಕರಿಸಿದವರು*

**ಸುನೀತಾ ಶ್ರೀಪತಿ ಉಪಾಧ್ಯಾಯ**

ನೃತ್ಯ ಶಿಕ್ಷಕರು, 'ಭಾಗವತಂ', ಬಪ್ಪನಾಡು ದೇವಸ್ಥಾನದ ಬಳಿ, ಮುಲ್ಕಿ, ಮಂಗಳೂರು.



# ಯಕ್ಷಗಾನ ಕಾರ್ಯಗಾರ ಮತ್ತು ಪಾಠಪಟ್ಟಿ

**ಅಂಗಳದ ಮಾತು ತಿಂಗಳ ಚರ್ಚೆ**

***(ಯಕ್ಷಗಾನ ಅಕಾಡೆಮಿಯ ಸಾರಥ್ಯದಲ್ಲಿ ಪ್ರಾರಂಭಗೊಂಡಿರುವ ಯಕ್ಷಗಾನದ ಪಾಠಪಟ್ಟಿ ಮತ್ತು ಪರೀಕ್ಷೆಗಳ ರಚನೆಗೆ ಕುರಿತಂತೆ ನಡೆಯುತ್ತಿರುವ ಚರ್ಚೆಯ ಮುಂದುವರಿದ ಭಾಗ, ಕಾರ್ಯಾಗಾರದ ಪ್ರತಿಕ್ರಿಯೆಗೆ ಪ್ರತಿಕ್ರಿಯೆಗಳಿಲ್ಲಿವೆ.)***

೧. ಈ ವಿಚಾರವು ತುಂಬಾ ಕ್ಲಿಷ್ಟಕರವಾಗಿದ್ದು ಇದನ್ನು ತಯಾರಿಸುವವರು ಲಯಬದ್ಧತೆ, ಅರ್ಥಜ್ಞಾನ, ಭಾವಕ್ಕೆ ಹೊಂದುವ, ರಾಗಜ್ಞಾನವಿರುವ ಭಾಗವತಿಕೆ, ಅದೇರೀತಿಯಲ್ಲಿ ಮದ್ದಳೆ, ಚಂಡೆ, ಕುಣಿತ, ವೇಷಭೂಷಣ, ಅರ್ಥಗಾರಿಕೆ ಮುಂತಾದ ಎಲ್ಲವನ್ನೂ ಬಲ್ಲವರಿಂದ ಮಾತ್ರ ರಚಿಸಲು ಸಾಧ್ಯವಾದೀತು. ಇಲ್ಲವಾದಲ್ಲಿ ಕಲಿಯುವ ವಿದ್ಯಾರ್ಥಿಗೆ ಕುಣಿತ, ವೇಷ, ಅರ್ಥ ಇವುಗಳಲ್ಲಿ ಹೊಂದಾಣಿಕೆಯಾಗದೆ ಗೊಂದಲವಾದೀತು. ಹಾಗೆ ನೋಡಿದಲ್ಲಿ ಪಾಠಪಟ್ಟಿಯನ್ನು ತಯಾರಿಸುವ ಯೋಗ್ಯರು ಯಕ್ಷಗಾನ ಕ್ಷೇತ್ರದಲ್ಲಿ ಅನೇಕರಿದ್ದಾರೆ. ಯಕ್ಷಗಾನ ಅಕಾಡೆಮಿಯವರು ಶಾಲೆಗಳಲ್ಲಿ ಯಕ್ಷಗಾನ ಪಠ್ಯವನ್ನು ಅಳವಡಿಸಲು ವಿದ್ಯಾ ಇಲಾಖೆಯನ್ನು ಒಪ್ಪಿಸಬೇಕು.

**– ಡಿ. ಶ್ರೀಕಂಠ ಘಾಟಕ್, ಕಾರ್ಕಳ**

೨. ಶಿಕ್ಷಣದಲ್ಲಿ ಯಕ್ಷಗಾನವನ್ನು ಸಂಯೋಜಿಸುವ ಸದುದ್ದೇಶದ ಪಠ್ಯ ವಿಷಯ ಕರಡುಪ್ರತಿ ತಯಾರಿ ಕಾರ್ಯಾಗಾರ ಎರಡು ಹಂತಗಳಲ್ಲಿ ಸುಳ್ಯದಲ್ಲಿ ನಡೆದದ್ದು ತೆರೆದಿಟ್ಟ ಪುಸ್ತಕದಷ್ಟೇ ಸತ್ಯ. ಈ ಪ್ರಕ್ರಿಯೆ ಒಂದೇ ಕಾರ್ಯಾಗಾರದಲ್ಲಿ ಮುಗಿದು ಹೋಗುತ್ತದೆಯೆಂದು ಯಕ್ಷಗಾನ ಅಕಾಡೆಮಿಯಾಗಲಿ ಅಥವಾ ಸಹಭಾಗಿತ್ವ ವಹಿಸಿದ್ದ ಸುಳ್ಯ ತಾಲೂಕು ಶಿಕ್ಷಕರ ಯಕ್ಷಗಾನ ಒಕ್ಕೂಟವಾಗಲಿ ಭಾವಿಸುವಷ್ಟು ಹುಂಬತನವನ್ನು ಹೊಂದಿಲ್ಲ. ಸದ್ಯಕ್ಕೆ ಪಠ್ಯ ವಿಷಯದ ಕರಡು ಪ್ರತಿ ಮಾತ್ರ ಸಿದ್ಧವಾಗಿದೆ. ಪಠ್ಯ ಪುಸ್ತಕ ರಚನೆಯಾಗಿಲ್ಲ. ಪಠ್ಯ ಪುಸ್ತಕ ರಚನಾ ಕಾರ್ಯಾಗಾರದ ವ್ಯಾಪ್ತಿ ವಿಸ್ತೃತವಾಗಿರುತ್ತದೆಯೆಂದು ನಮಗೂ ಗೊತ್ತಿದೆ.

ಸಮಾಜ ಶಾಸ್ತ್ರ ಉಪನ್ಯಾಸಕ ಮತ್ತು ಸ್ನೇಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಚಂದ್ರಶೇಖರ ದಾಮ್ಲೆ ಈ ಕಾರ್ಯಾಗಾರದಲ್ಲಿ ತಾವು ಉಳಿದಿದೆಯೆಂದು





ಭಾವಿಸಿರುವ ಅರೆ ತಿಳುವಳಿಕೆಯ ಕೆಲ ಪ್ರಶ್ನೆಗಳಿಗೆ ಉತ್ತರಿಸುವ ರೀತಿಯ ಪ್ರತಿಕ್ರಿಯೆಯೊಂದನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಮುಖ್ಯವಾಗಿ ದಾಮ್ಲೆಯವರು ನಡೆದು ಹೊದ ಕಾರ್ಯಾಗಾರದಲ್ಲಿ ಭಾಗವಹಿಸಿದ ವಿಷಯ ತಜ್ಞರ ಮತ್ತು ಕಾರ್ಯಾಗಾರದ ವಿಧಾನದ ಬಗ್ಗೆ ಪ್ರಶೆಗಳನ್ನು ಎತ್ತಿದ್ದಾರೆ. ಜೊತೆಗೆ ಪರೋಕ್ಷವಾಗಿ ಈ ಕಾರ್ಯಾಗರದಲ್ಲಿ 'ತಾನು' ಕೇಂದ್ರಿತವಾಗದೇ ಹೋದುದರ ಕುರಿತಂತೆ ಹತಾಷೆಯನ್ನು ವ್ಯಕ್ತಪಡಿಸಿದ್ದಾರೆ. ಹಾಗೆ ನೋಡಿದರೆ ಕಾರ್ಯಾಗಾರದ ಪೂರ್ವಭಾವಿ ಸಭೆಗಳಲ್ಲಿ ದಾಮ್ಲೆಯವರು ಕೂಡಾ ಆಹ್ವಾನಿತರೇ ಆಗಿದ್ದರು. ಆದರೆ ಅವರು ಭಾಗವಹಿಸಿಲ್ಲ ಯಾಕೆ? ಎನ್ನುವ ಪ್ರಶ್ನೆಗೆ ದಾಮ್ಲೆ ಉತ್ತರಿಸುವುದಿಲ್ಲ. ಜೊತೆಗೆ ಈ ಕಾರ್ಯಾಗಾರದಲ್ಲಿ ಆಹ್ವಾನಿತ ಸಂಪನ್ಮೂಲ ವ್ಯಕ್ತಿಯಾಗಿಯೂ ಅರೆಬರೆ ಭಾಗಿಯಾಗಿದ್ದರು ಎನ್ನುವುದು ಗಮನಾರ್ಹ. ಈಗ ಯಕ್ಷಗಾನದ ಸಂದರ್ಭದಲ್ಲಿ ತೆರೆದುಕೊಳ್ಳುತ್ತಿರುವ ಹೊಸ ಆಯಾಮವೊಂದಕ್ಕೆ ವಿಘ್ನಕಾರರಾಗಿ ಪರಿಣಮಿಸುತ್ತಿದ್ದಾರೆಂದು ಹೇಳದೆ ಇನ್ನು ವಿಧಿಯಿಲ್ಲ.

ಸುಮಾರು ಅರುವತ್ತು ಜನ ಮೂಡಲಪಾಯ ಮತ್ತು ಪಡುವಲಪಾಯ ಯಕ್ಷಗಾನಗಳ ತಜ್ಞರು ಭಾಗವಹಿಸಿದ್ದ ಕಾರ್ಯಾಗಾರದ ಆರಂಭದಲ್ಲಿಯೇ ರಾಜ್ಯ ಮಟ್ಟದ ಹಲವಾರು ಪಠ್ಯ ಪುಸ್ತಕ ರಚನೆಯ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿರುವ ಪ್ರಕಾಶ್ ಮೂಡಿತ್ತಾಯರು ಕರಡುಪ್ರತಿ ತಯಾರಿಯ ರೂಪುರೇಷೆಗಳ ಕುರಿತಂತೆ ಸಮಗ್ರ ಮಾಹಿತಿಯನ್ನು ನೀಡಿದ್ದರು. ಭಾಗವಹಿಸಿದ್ದ ತಜ್ಞರೂ ಅದರ ಪ್ರಕಾರವೇ ಚಿಂತನೆ ನಡೆಸಿದ್ದರು. ಕಾರ್ಯಾಗಾರದ ದಿನ ಮಕ್ಕಳ ಮತ್ತು ಹಿರಿಯ ಕಲಾವಿದರಿಂದ ನಡೆದ ಪ್ರತ್ಯೇಕ ಯಕ್ಷಗಾನ ಪ್ರದರ್ಶನಗಳು ಪ್ರಾತ್ಯಕ್ಷಿಕೆಗಳಾಗಿರದೆ, ಕಾರ್ಯಗಾರದ ಅಂಗಭಾಗವಾಗಿ ಮನೋರಂಜನೆಗಾಗಿ ನಡೆದವುಗಳಾಗಿದ್ದವು.

ನಂತರ ಎರಡನೇಯ ಹಂತದ ಕಾರ್ಯಾಗಾರದಲ್ಲಿ ಪಠ್ಯ ವಿಷಯದ ಸಿದ್ಧ ಕರಡುಪ್ರತಿಯನ್ನು ಮೊದಲು ಕಾರ್ಯಾಗಾರದಲ್ಲಿ ಚರ್ಚಿಸಿದ ವಿಷಯದ ಆಧಾರದಲ್ಲಿಯೇ ಸಿದ್ಧಗೊಳಿಸಲಾಗಿತ್ತು. ದಾಮ್ಲೆಯವರು ಪೂರ್ವಾಗ್ರಹ ಪೀಡಿತರಾಗದೇ ಇರುತ್ತಿದ್ದರೆ, ಅದರ ರೂಪುರೇಷೆ ವಿಧಾನಗಳನ್ನು ಅರ್ಥೈಸಲು ಸಾಧ್ಯವಾಗುತ್ತಿತ್ತು. ಅವರು ಕಾರ್ಯಾಗಾರದಲ್ಲಿದ್ದುಕೊಂಡೇ ತಮ್ಮ ಜ್ಞಾನ, ಅನುಭವಗಳನ್ನು ಧಾರೆಯೆರೆದಿದ್ದರೆ ಸಲ್ಲಿಸಬೇಕಾದ ನ್ಯಾಯಕ್ಕೆ ಗೌರವ ಸಲ್ಲಿಸುವಂತಾಗುತ್ತಿತ್ತು !

ಕಾರ್ಯಾಗಾರವು ಯಕ್ಷಗಾನದ ಪ್ರಧಾನ ೫ ಅಂಗಭಾಗಗಳನ್ನು ವಿಭಾಗ ಮಾಡಿ ಅವುಗಳಲ್ಲಿ ಪಠ್ಯ ವಿಷಯವಾಗಿ ೩ ಹಂತದ ವಯೋಮಾನದ ವಿದ್ಯಾರ್ಥಿಗಳನ್ನು(ಜೂನಿಯರ್,ಸೀನಿಯರ್,ವಿದ್ವತ್) ಗಮನದಲ್ಲಿಟ್ಟುಕೊಂಡು

ಚರ್ಚಿಸಲಾಗಿತ್ತು. ಆಯಾಯ ಅಂಗಭಾಗಗಳಲ್ಲಿ ಪರಿಣತ ವಿದ್ವಾಂಸರು ನಡೆಸಿದ ಚಿಂತನೆಗಳನ್ನು ಸಂಯೋಜನಾತ್ಮಕವಾಗಿ ಪುನರ್ರಚಿಸಿ ತಯಾರಿಸಿದ ಕರಡು ಪ್ರತಿ 'ಯಕ್ಷಗಾನ ಶಿಕ್ಷಣ' ಎನ್ನುವ ವಿಷಯ ಅತ್ಯಂತ ಸೂಕ್ಷ್ಮವಾಗಿದೆ. ಕಾರ್ಯಾಗಾರದ ಉದ್ದೇಶ ಯಕ್ಷಗಾನದ ಮೂಲಭೂತ ಸಂಗತಿಗಳನ್ನು ಎಷ್ಟರ ಮಟ್ಟಿಗೆ ಕಲಿಯಬೇಕು ಎನ್ನುವುದಷ್ಟನ್ನು ಮಾತ್ರ ಚಿಂತಿಸುವುದಾಗಿತ್ತೇ ಹೊರತು ಯಕ್ಷಗಾನದ ಪರಿಷ್ಕಾರಗಳಿಗೆ ಸಂಬಂಧಿಸಿದುದಾಗಿರಲಿಲ್ಲ. ಬಹುಷಃ ದಾಮ್ಲೆಯವರು ತಮ್ಮ ಪ್ರತಿಕ್ರಿಯೆಯಲ್ಲಿ ನೀಡಿದ ಸಲಹೆಗಳು ಯಕ್ಷಗಾನದ ಪರಿಷ್ಕಾರ ಕಾರ್ಯಾಗಾರಕ್ಕೆ ಅನ್ವಯವಾಗಬಹುದೇನೋ?

ಶಿಕ್ಷಣ ತಜ್ಞರೆಂದು ಗುರುತಿಸಿಕೊಳ್ಳುವ ದಾಮ್ಲೆಯವರು ತಮ್ಮ ಪ್ರತಿಕ್ರಿಯೆಯಲ್ಲಿ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ವಿಶೇಷಜ್ಞರ ಪಟ್ಟಿ ಮಾಡುವುದಿಲ್ಲವೇಕೆ? ಹೊಸ್ತೋಟ ಮಂಜುನಾಥ ಭಾಗವತರು, ಕೆ.ಗೋವಿಂದ ಭಟ್, ಸದಾನಂದ ಐತಾಳ, ಕರ್ಗಲ್ಲು ವಿಶ್ವೇಶ್ವರ ಭಟ್, ಮಾಂಬಾಡಿ ಸುಬ್ರಹ್ಮಣ್ಯ ಭಟ್, ಪೆರುವಡಿ ನಾರಾಯಣ ಭಟ್, ಸಬ್ಬಣ್ಣಕೋಡಿ ರಾಮಭಟ್ ಹೀಗೆ ತೆಂಕುತಿಟ್ಟು ಮಾತ್ರವಲ್ಲದೆ ಬಡಗುತಿಟ್ಟು, ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ರಾಧನಾಟ, ಗೊಂಬೆಯಾಟ, ಮುಂತಾಗಿ ವಿವಿಧ ತಿಟ್ಟುಗಳ ಯಕ್ಷಗಾನದ ಹಿಮ್ಮೇಳ, ಮುಮ್ಮೇಳ, ನೇಪಥ್ಯ ಇತ್ಯಾದಿ ಹೊರ–ಒಳಗನ್ನು ಬಲ್ಲ, ಅಷ್ಟೇ ಅಲ್ಲದೆ ಶಿಕ್ಷಣ ಮತ್ತು ಯಕ್ಷಗಾನದಲ್ಲಿ ಪರಿಣತರಾದ ಎಂ.ಎಲ್ ಸಾಮಗರಂತಹ ಅನೇಕರು ಕರ್ನಾಟಕದ ವಿವಿಧ ಭಾಗಗಳಿಂದ ಬಂದು ಭಾಗಿಯಾಗಿದ್ದ ಸಂಗತಿ ದಾಮ್ಲೆಯವರ ದೃಷ್ಟಿಯಲ್ಲಿ ನಿರರ್ಥಕ ಎಂದು ಕಂಡಿತೇ? ಯಕ್ಷರಂಗದ ಕಲಾವಿದರನ್ನು ದಾಮ್ಲೆಯವರು ವಿಭಾಗಿಸುವಂತಹ ಕ್ರಮವೇ ಕ್ಷೇತ್ರಕ್ಕೆ ಧಕ್ಕೆ ತರುವಂತದ್ದಾಗಿದೆ. ಡಾ. ಪ್ರಭಾಕರ ಜೋಷಿ, ಡಾ. ರಾಘವ ನಂಬಿಯಾರ್, ಪದ್ಯಾಣ, ಕೋಳ್ಯೂರು, ಚಿಪ್ಪಾರು ಮುಂತದವರನ್ನೂ ನಾವು ಆಹ್ವಾನಿಸಿದ್ದೆವು. ಅವರ ಅನನುಕೂಲತೆ ಕಾರ್ಯಾಗಾರದಲ್ಲಿ ಅವರನ್ನು ಭಾಗವಹಿಸದಂತೆ ಮಾಡಿರುವಾಗ ಅದನ್ನು ಸಂಘಟಕರ ಔದಾಸೀನದಿಂದಾದ ಕೊರತೆಯೆಂದು ಉಲ್ಲೇಖಿಸುವಲ್ಲಿ ದಾಮ್ಲೆ ಸಿನೀಕರಾಗಿ ಯೋಚಿಸುತ್ತಾರೆನ್ನುವುದನ್ನು ಸೂಚಿಸುವುದಿಲ್ಲವೇ? ಹಾಗಾದರೆ ಹೊಸದಾಗಿ ಚಿಂತಿಸುವವರು ಅವರಿಗೆ ಬೇಕಿಲ್ಲವೇ?

ಪಠ್ಯ ಪುಸ್ತಕ ರಚನೆಯ ಸಂದರ್ಭದಲ್ಲಿ ವಿದ್ವತ್ಪೂರ್ಣ ಅಧ್ಯಯನಗಳು, ರಚನೆಗಳು ಆಕರ ಸಾಮಾಗ್ರಿಗಳಾತ್ತವೆಯೆನ್ನುವುದು ಸಂಘಟಕರಿಗೆ ಗೊತ್ತಿಲ್ಲದ ವಿಷಯವೇನಲ್ಲ. ಆದರೆ ದಾಮ್ಲೆಯವರು ಅವೆಲ್ಲವೂ ನನ್ನಲ್ಲಿ ಲಭ್ಯವೆಂದು ತೋರಿಸುವ ಉದಾರತೆಯಲ್ಲಿ ತಾನು ಯಕ್ಷಗಾನಕ್ಕೆ ಅಧಿಕೃತವೆಂದು ದಾಖಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಪಠ್ಯ ವಿಷಯದ ಕರಡು ಪ್ರತಿ ತಯಾರಿಯಲ್ಲಿ ಪಾಲ್ಗೊಂಡ ಸಂಪನ್ಮೂಲ ವ್ಯಕ್ತಿಗಳು ಯಕ್ಷಗಾನದ ಒಳ–ಹೊರಗನ್ನು ಬಲ್ಲವರು, ಕಲಾವಿದರು, ಕಲಾವಿಮರ್ಶಕರು,





ಗುರುಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪಳಗಿದವರು ಆಗಿದ್ದರು. ಈ ದೃಷ್ಟಿಯಿಂದ ಕರಡುಪ್ರತಿ ಸಮಗ್ರತೆಯ ಪರಿಕಲ್ಪನೆಯಲ್ಲಿಯೇ ತಯಾರಾಗಿದೆ. ಹಾಗಾಗಿಯೇ ಬೇರೆ ಯಾರೂ ವಿಘ್ನ ಸಂತೋಷಿಗಳಾಗಿ ಅಪಸ್ವರ ಎತ್ತದೆ ಯಕ್ಷಗಾನದ ಕುರಿತ ತಮ್ಮ ಕಾಳಜಿಯನ್ನು ಮೆರೆದಿದ್ದಾರೆ. ಹಾಗಾಗಿ ಡಾ. ದಾಮ್ಲೆಯವರಿಗೆ ಹುಟ್ಟಿಕೊಂಡ ಅನುಮಾನಗಳು ಮತ್ತು ಪ್ರಶ್ನೆಗಳು ತೀರಾ ವೈಯಕ್ತಿಕವಷ್ಟೇ ವಿನಃ ಸಮಷ್ಠಿಯಾದವುಗಳಲ್ಲ.

ಬಹುಷಃ ದಾಮ್ಲೆಯವರೇ ಸಂಪನ್ಮೂಲ ವ್ಯಕ್ತಿಯಾಗಿ ಕೇಂದ್ರ ನೆಲೆಯಲ್ಲಿರುತ್ತಿದರೆ ಅವರಿಗೆ ಯಾವ ಪ್ರಶ್ನೆಗಳೂ ಉಳಿಕೆಗಳಾಗಿ ಕಾಣುತ್ತಿರಲಿಲ್ಲ. ಡಾ. ಸುಂದರ ಕೇನಾಜೆ ಅಕಾಡೆಮಿ ಸದಸ್ಯರಾದ ಕಾರಣದಿಂದಾಗಿಯೇ ಸುಳ್ಯದಲ್ಲಿ ಕಾರ್ಯಾಗಾರ ನಡೆಯುವಂತಾಗಿತ್ತು. ಆದರೆ ಯಕ್ಷಗಾನ ಅಕಾಡೆಮಿಯ ಸದಸ್ಯನಾಗುವ ರಾಜಕೀಯ ಓಟದ ಸ್ಪರ್ಧೆಯಲ್ಲಾದ ಸೋಲನ್ನು ಒಪ್ಪಿಕೊಳ್ಳಲಾಗದ ಹತಾಶೆಯೇ ದಾಮ್ಲೆಯವರ ಈ ವರ್ತನೆಗೆ ಕಾರಣವಾಗಿದೆ ಎಂಬುದು ಇತರ ವೇದಿಕೆಗಳಲ್ಲೂ ಸ್ಪಷ್ಟವಾಗಿದೆ. ಅಷ್ಟಕ್ಕೂ ಅವರ ತೆಂಕುತಿಟ್ಟು ಹಿತರಕ್ಷಣಾ ವೇದಿಕೆಗೆ ಶಿಕ್ಷಕರ ಯಕ್ಷಗಾನ ಒಕ್ಕೂಟ ಪರ್ಯಾಯವಲ್ಲ. ದಾಮ್ಲೆಯವರೂ ಕೂಡಾ ಶಿಕ್ಷಕರ ಒಕ್ಕೂಟದಲ್ಲಿ ಬಣ್ಣ ಹಾಕುವವರೇ ! ಎರಡು ವೇದಿಕೆಗಳೂ ಕೂಡಾ ಪರಸ್ಪರವಾಗಿವೆ.

ನಡೆದು ಹೋದ ಕಾರ್ಯಾಗಾರದಲ್ಲಿ ಲೋಪಗಳಿರಬಹುದು. ಆದರೆ ಯಕ್ಷಗಾನದ ಕುರಿತಂತೆ ಒಂದಷ್ಟು ಅರಿವು ಇರುವ ದಾಮ್ಲೆಯವರು, ಹೊಸ ಆಯಾಮಗಳಿಗೆ ತೆರೆದುಕೊಳ್ಳಬೇಕಾದ ಜರೂರಿನಲ್ಲಿರುವ ಯಕ್ಷಗಾನ ಪ್ರಕಾರಕ್ಕೆ ಪೂರಕವಾಗಿ ವರ್ತಿಸುವುದು ಅವರಿಗೆ ಶೋಭೆ ಎನ್ನುವುದು ಸುಳ್ಯ ತಾಲೂಕು ಶಿಕ್ಷಕರ ಒಕ್ಕೂಟದ ಸ್ಪಷ್ಟ ಗ್ರಹಿಕೆ.

**– ಅಧ್ಯಕ್ಷರು ಮತ್ತು ಸದಸ್ಯರು,**
**ಶಿಕ್ಷಕರ ಯಕ್ಷಗಾನ ಒಕ್ಕೂಟ (ರಿ.), ಸುಳ್ಯ.**

## ಚುಟುಕ




**ಶಿವನ ತಾಂಡವ ನೃತ್ಯ ಶುರುವಾಗೊ ದಿನವೆಂದು?**
**ದುಷ್ಟ ನಿಗ್ರಹಗೈವ ಪರ್ವ ದಿನವೆಂದು?**
**ಸಜ್ಜನರ ಮೊರೆ ಕೇಳಿ ಶಿವನ ತಪ ಮುರಿವಂದು,**
**ಕಾಯುತಿದೆ ಜಗದೊಡಲು ನಿತ್ಯ ಬೆಂದು**

**– ಕೆ. ಅಕ್ಷಯರಾಮ**




# ಶೇಣಿಯೆಂದರೆ ವಾಲಿಯ ಹಾಗೆ!

● ರಾಕೇಶ್ ಕುಮಾರ್ ಕಮ್ಮಜೆ

ಯಕ್ಷರಂಗದಲ್ಲಿ ಒಂದು ಸಂಚಲನ ಮೂಡಿಸುವ ಹೆಸರೆಂದರೆ ಅದು ಶೇಣಿ ಗೋಪಾಲಕೃಷ್ಣ ಭಟ್. ಶೇಣಿಯವರು ರಂಗದಲ್ಲಿದ್ದ ಕಾಲವನ್ನು 'ಶೇಣಿ ಯುಗ'ವೆಂದೇ ಕರೆಯುವುದಿದೆ. ಆಗೆಲ್ಲಾ ಜನ ತಾಳಮದ್ದಳೆಗಳಿಗೆ ಹೋಗುತ್ತಿದ್ದುದೇ ಶೇಣಿಯವರ ಅರ್ಥವೈಭವಕ್ಕಾಗಿ. ಅಷ್ಟರಮಟ್ಟಿಗೆ ಶೇಣಿ ಯಕ್ಷರಂಗವನ್ನು ಆವರಿಸಿದ್ದರು. ಕಲಾಸಕ್ತರು ಅವರ ಅರ್ಥ ಕೇಳುವುದಕ್ಕಿಂತ ಹೆಚ್ಚಾಗಿ ಅನುಭವಿಸುತ್ತಿದ್ದರೆಂದರೆ ತಪ್ಪಲ್ಲ.


ಶೇಣಿಯವರ ವಿಶೇಷವೆಂದರೆ ಅವರ ಅರ್ಥಗಳಲ್ಲಿ ಒಂದು ಹೊಸ ನೋಟ ಜನರಿಗೆ ಸಿಗುತ್ತಿತ್ತು. ಒಂದು ಪಾತ್ರಕ್ಕೆ ಅದರಲ್ಲೂ ಮುಖ್ಯವಾಗಿ ಖಳಪಾತ್ರಕ್ಕೆ ಹೀಗೂ ಒಂದು ಆಯಾಮ ಕಲ್ಪಿಸಬಹುದು ಅಥವಾ ಈ ರೀತಿಯೂ ಆ ಪಾತ್ರವನ್ನು ಚಿತ್ರಿಸಬಹುದು ಅಂತ ಹೊಸ ರೀತಿಯಲ್ಲಿ ಆ ಪಾತ್ರವನ್ನು ರಂಗ ಸಾಕ್ಷಾತ್ಕಾರಗೊಳಿಸುತ್ತಿದ್ದರು ಶೇಣಿ. ಅವರಲ್ಲಿ ಅಗಾಧವಾದ ಓದು, ಅನುಭವಗಳೆರಡೂ ಇದ್ದವು. ಅವರು ಯಾವುದೇ ಪಾತ್ರಕ್ಕೆ ಕೂರಲಿ ಅಥವ ಕುಣಿಯಲಿ ಆ ಪಾತ್ರದ ಸಂಪೂರ್ಣ ಕಥೆ ಅವರಿಗೆ ಗೊತ್ತಿರುತ್ತಿತ್ತು. ವಿಶೇಷವೆಂದರೆ ಎದುರು ಪಾತ್ರದ ಸಂಪೂರ್ಣ ವಿಷಯವೂ ಅವರಿಗೆ ಗೊತ್ತಿರುತ್ತಿತ್ತು! ಆದ್ದರಿಂದಲೇ ಶೇಣಿ ಗತಿಸಿದಾಗ 'ಯಕ್ಷರಂಗ ಬರಡಾಯಿತು' ಎಂಬ ಉದ್ಗಾರ ಕೇಳಿಬಂದದ್ದು.

ಆ ದಿನಗಳಲ್ಲಿ ಶೇಣಿಯವರನ್ನು ಅರ್ಥಗಾರಿಕೆಯಲ್ಲಿ ಮಣಿಸುವುದು ಆಗದೇ ಇದ್ದ ಮಾತು. ಈಗಾಗಲೇ ಹೇಳಿದಂತೆ ತನ್ನ ಹಾಗೂ ಎದುರು ಪಾತ್ರಗಳೆರಡರ ವಿಚಾರಗಳೂ ಅವರಿಗೆ ಸಂಪೂರ್ಣವಾಗಿ ತಿಳಿದಿರುತ್ತಿದ್ದುದರಿಂದ ಯಾವುದಾದರೂ ಒಂದು ಎಳೆಯ ಮೂಲಕ ಅವರು ಎದುರಾಳಿಯನ್ನು ಕಟ್ಟಿ ಹಾಕುತ್ತಿದ್ದರು. ಆದ್ದರಿಂದಲೇ ಅವರ ಮುಂದೆ ಅರ್ಥಕ್ಕೆ ಕೂರಲು ಅನೇಕ ಮಂದಿ ಹಿಂದೆ ಸರಿಯುತ್ತಿದ್ದುದುಂಟು. "ಶೇಣಿಯೆಂದರೆ ವಾಲಿಯ ಹಾಗೆ. ಅವರ ಎದುರು ಕೂತ ತಕ್ಷಣ ಎದುರು ಅರ್ಥಧಾರಿ ತನ್ನ ಅರ್ಥ ಬಲ ಕಳೆದುಕೊಳ್ಳುತ್ತಾನೆ" ಅಂತ ಕೆಲವು ಯಕ್ಷಪ್ರೇಮಿಗಳು ತಮಾಷೆಯಾಗಿ ಹೇಳುವುದಿದೆ. ಅದು ವಾಸ್ತವವೂ ಆಗಿತ್ತು.

ಅವರ ಇನ್ನೊಂದು ವಿಶೇಷತೆಯೆಂದರೆ ಖಳ ಪಾತ್ರವನ್ನೂ ಉತ್ತಮ ರೀತಿಯಲ್ಲಿ ಚಿತ್ರಿಸುತ್ತಿದ್ದುದು. ಶೇಣಿಯವರು ರಾವಣನಾಗಿ ಅರ್ಥ ಹೇಳುತ್ತಿದ್ದರೆ ಜನ 'ಹೌದು, ರಾವಣ ಅಂಥದ್ದೇನು ತಪ್ಪು ಮಾಡಿದ್ದಾನೆ?' ಅಂತ ಮಾತಾಡಿಕೊಳ್ಳುತ್ತಿದ್ದರು. ಕೌರವ ಮಾಡಿದರೆ 'ಅವ ಪಾಂಡವರಿಗೆ ರಾಜ್ಯ ಕೊಡದ್ದರಲ್ಲಿ ತಪ್ಪೇನೂ ಇಲ್ಲ ಬಿಡಿ' ಅಂತನ್ನುತ್ತಿದ್ದರು. ಇದೇ







ಶೇಣಿ ರಾಮ ಮಾಡಿದರೆ ರಾವಣ ಅತ್ಯಂತ ಕೆಟ್ಟವ ಅನ್ನುವ ರೀತಿಯಲ್ಲಿ ಹೇಳಿ ಸಾಧಿಸುತ್ತಿದ್ದರು, ಭೀಮನಾಗಿ ಅರ್ಥ ಶುರುವಿಟ್ಟುಕೊಂಡರೆ ದುರ್ಯೋಧನನಷ್ಟು ಕೆಟ್ಟವನೇ ಈ ಜಗತ್ತಿನಲ್ಲಿಲ್ಲ ಅನ್ನುವ ಹಾಗೆ ಮಾಡಿಬಿಡುತ್ತಿದ್ದರು. ಇದು ಶೇಣಿಯವರ ತಾಕತ್ತೇ ಸರಿ. ಈ ಒಂದು ವಿಶಿಷ್ಟ ಕಲೆಯೇ ಅವರ ಹೆಚ್ಚುಗಾರಿಕೆಯಾಗಿತ್ತು.

ಅವರ ಕೃಷ್ಣಸಂಧಾನದ ಕೌರವನ ಅರ್ಥ ಕೇಳಬೇಕು. ಅವರ ವಾದ ಸರಣಿ ಹೇಗಿರುತ್ತಿತ್ತೆಂದರೆ...

"ಕೃಷ್ಣಾ ನೀನು ಭಗವಂತ ತಾನೇ?, ಅಣುರೇಣುತೃಣಕಾಷ್ಟಗಳಲ್ಲಿ ನೀನಿದ್ದಿ ಅಲ್ಲವೇ?, ನೀನು ಮನಸು ಮಾಡದೆ ಹುಲ್ಲುಕಡ್ಡಿಯೂ ಅಲುಗಾಡದಷ್ಟೇ? ಇದೆಲ್ಲಾ ಹೌದು ಅಂತಾದರೆ, ನೀನು ಭಗವಂತನೇ ಎಂಬುದು ನಿಜವಾದರೆ ಸಮರಕ್ಕೆ ಸಿದ್ಧವಾಗಿ ಕೂತ ನನ್ನ ಮನಸ್ಸನ್ನು ಸಂಗ್ರಾಮದಿಂದ ಸಂಧಾನದೆಡೆಗೆ ತಿರುಗಿಸು ನೋಡೋಣ?" ಶೇಣಿ ಕೌರವ ಈ ರೀತಿ ಹೂಂಕರಿಸುತ್ತಿದ್ದರೆ ಬಡ ಭಗವಂತ ನೀರಾಗುತ್ತಿದ್ದ!

ಗದಾಯುದ್ಧದ ದುರ್ಯೋಧನ ಅವರ ಇಷ್ಟದ ಪಾತ್ರಗಳಲ್ಲೊಂದಾಗಿತ್ತು. ಅಲ್ಲಿಯ ಗಮ್ಮತ್ತು ಕೇಳಬೇಕು. ನೀರಿನಲ್ಲಿ ಮುಳುಗಿರುವ ಕೌರವನನ್ನುದ್ದೇಶಿಸಿ ಭೀಮ "ಎಲಾ ಕುರುಕುಲ ಕುನ್ನಿಯೇ.... ಬಾ ಮೇಲೆ ಬಾ, ತಾಕತ್ತಿದ್ದರೆ ಈಗ ದ್ರೌಪದಿಯ ಸೀರೆಗೆ ಕೈ ಹಾಕು...." ಎಂದೆಲ್ಲಾ ಅಬ್ಬರಿಸುತ್ತಾನೆ. ಮೇಲೆ ಬಂದ ನಂತರ ಶೇಣಿ ಹೇಳುವುದು ಭಲೇ ಸೊಗಸು. ಅವರೆನ್ನುತ್ತಾರೆ " ದ್ರೌಪದಿಯ ಸೀರೆಗೆ ಕೈ ಹಾಕುವುದಕ್ಕೆ ಅವಳೇನು ಇಲ್ಲಿ ಉಟ್ಟುಕೊಂಡು ಬಂದಿದ್ದಾಳಾ? ಅವಳ ಸೀರೆಗೆ ಈವತ್ತೂ ಕೈಯಿಟ್ಟೇನು, ಯಾವತ್ತೂ ಕೈಯಿಟ್ಟೇನು, ಆವತ್ತು ಇವರಿಂದ ಏನೂ ಮಾಡುವುದಕ್ಕಾಗಿಲ್ಲವಲ್ಲ, ಅಬದ್ಧಂ ಪಟಿತ್ವ ಕುಚೋದ್ಯಂ ಕರೋತಿ"

ಹೀಗೆ ತಾನು ಯಾವುದೇ ಪಾತ್ರಕ್ಕೆ ಕೂರಲಿ ಅಲ್ಲೊಂದು ವೈಭವವನ್ನು ಸಾರುತ್ತಿದ್ದ ಶೇಣಿಯವರು ತೆಂಕು, ಬಡಗೆಂಬ ತಿಟ್ಟು ಲೆಕ್ಕಾಚಾರಗಳೆರಡನ್ನೂ ಮೀರಿ ನಿಂತ ಕಲಾವಿದ, ಪ್ರತಿಭಾ ರಾಶಿ. ನಿಜಕ್ಕೂ ಶೇಣಿಯವರ ಅನುಪಸ್ಥಿತಿ ಈಗ ಢಾಳಾಗಿ ಕಾಣಿಸುತ್ತಿದೆ. ಶೇಣಿಯವರನ್ನು ಒಂದಷ್ಟು ಬಾರಿ ಮಾತ್ರ ಕೇಳಿದ ಈಗಿನ ತಲೆಮಾರಿನವರಿಗಂತೂ ಶೇಣಿಯವರನ್ನು ಹೆಚ್ಚಾಗಿ ಕೇಳಿಸಿಕೊಳ್ಳುವ ಭಾಗ್ಯವಿಲ್ಲದಾಯಿತಲ್ಲಾ ಎಂಬ ಕೊರಗು ಕಾಡುತ್ತಲೇ ಇರುತ್ತದೆ.

ಹಾಂ, ಶೇಣಿ ಗೋಪಾಲಕೃಷ್ಣ ಭಟ್ಟರ ಕುರಿತು ಇನ್ನೂ ಸಾಕಷ್ಟು ವಿಷಯಗಳಿವೆ. ಅದಕ್ಕಿಂತ ಹೆಚ್ಚಾಗಿ ಸ್ವಾರಸ್ಯದ ಸಂಗತಿಗಳಿವೆ. ಅವುಗಳನ್ನೆಲ್ಲಾ ಮುಂದೊಮ್ಮೆ ಹೇಳಿಯೇನು ಬಿಡಿ. ■



# ಒಳನೋಟ

- ನೂಪುರ ಭ್ರಮರಿ ಬಳಗದ ಹಿತೈಷಿ ಶ್ರೀ ರಾಮಚಂದ್ರಾಪುರ ಮೇಳದ ಹಾಸ್ಯ ಪಾತ್ರ ಕಲಾವಿದ, ಸೀತಾರಾಮ್ ಕುಮಾರ್ ಕಟೀಲ್ ಅವರಿಗೆ ಈ ಸಾಲಿನ ಪ್ರತಿಷ್ಠಿತ ಆಯಭಟ ಪ್ರಶಸ್ತಿ ದೊರಕಿದೆ. ಪತ್ರಿಕೆಯ ಬಳಗ ಮತ್ತು ಓದುಗರ ವತಿಯಿಂದ ಅವರಿಗೆ ಹಾರ್ದಿಕ ಅಭಿನಂದನೆಗಳು.

- **ಏಪ್ರಿಲ್ ೧೩–೧೬:** ಮಂಗಳೂರಿನ ಪುರಭವನದಲ್ಲಿ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಮತ್ತು ನಿಟ್ಟೆ ಎಜುಕೇಶನ್ ಇನ್ಸ್ಟಿಟ್ಯೂಟ್ ಸಹಭಾಗಿತ್ವದಲ್ಲಿ ೪ ದಿನಗಳ ಕಾಲ ಸಂಸ್ಕೃತಿ ಸಿಂಚನ ಉತ್ಸವ ನಡೆಯಿತು. ಈ ಸಂದರ್ಭ ಹಲವು ಪ್ರತಿಷ್ಠಿತ ಕಲಾವಿದರಿಂದ ಸಂಗೀತ, ಜುಗಲ್‌ಬಂದಿ, ಭರತನಾಟ್ಯ, ತೈಯ್ಯಂ, ಕಥಕ್ಕಳಿ, ಏಕವ್ಯಕ್ತಿ ಯಕ್ಷಗಾನ, ಮುಂತಾದ ಕಾರ್ಯಕ್ರಮಗಳು ನಡೆದವು. ೨೦೦೯ರ ಸಂಸ್ಕೃತಿ ಸಿಂಚನ ಪ್ರಶಸ್ತಿ ಏಕವ್ಯಕ್ತಿ ಯಕ್ಷಗಾನ ಸಾಮ್ರಾಟ, ನೂಪುರ ಭ್ರಮರಿ ಬಳಗದ ಹಿತೈಷಿ ಮಂಟಪ ಪ್ರಭಾಕರ ಉಪಾಧ್ಯಾಯ ಅವರಿಗೆ ಸಂದಿತು. ಪತ್ರಿಕೆಯ ಪರವಾಗಿ ಶುಭಾಶಯಗಳು.

- **ಏಪ್ರಿಲ್ ೨೯ :** ವಿಶ್ವ ನೃತ್ಯದಿನದ ಅಂಗವಾಗಿ ಬೆಂಗಳೂರಿನ ಭಾರತೀಯ ವಿದ್ಯಾಭವನ, ಚೌಡಯ್ಯ ಮೆಮೊರಿಯಲ್ ಹಾಲ್, ಸೇವಾ ಸದನ ಸಭಾಭವನಗಳಲ್ಲಿ ವಿವಿಧ ನೃತ್ಯ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಅಂತಾರಾಷ್ಟ್ರೀಯ ನೃತ್ಯ ದಿನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭ ವಿವಿಧ ದೇಶ–ವಿದೇಶಗಳ ಪ್ರಮುಖವೆನಿಸುವ ನೃತ್ಯ ಪ್ರಕಾರಗಳ ಕುರಿತಾಗಿ ಅನೇಕ ಹಿರಿ–ಕಿರಿಯ ಕಲಾವಿದರಿಂದ ನೃತ್ಯ ಪ್ರದರ್ಶನ, ಬ್ಯಾಲೆ, ವಿಚಾರ ಸಂಕಿರಣ, ಕಾರ್ಯಾಗಾರಗಳು ನಿರಂತರ ೩ ದಿನಗಳ ಪರ್ಯಂತ ನಡೆದವು.

- ಬೆಂಗಳೂರಿನ ಒಡಿಸ್ಸಿ ನೃತ್ಯ ಕಲಾವಿದೆ ವಾಣಿ ಮಾಧವ್ ಅವರ ಸಂಸ್ಥೆಯ ವತಿಯಿಂದ ಸಮಕಾಲೀನ ನೃತ್ಯ ಚಲನೆಗಳು, ಮತ್ತು ಕೊರಿಯೊಗ್ರಫಿ ತಂತ್ರಗಳ ಕುರಿತಾಗಿ ಅಂತಾರಾಷ್ಟ್ರೀಯ ಮನ್ನಣೆ ಪಡೆದ ನಿರ್ದೇಶಕರಾದ ರಾಮ್ಲಿ ಇಬ್ರಾಹಿಂ ಅವರಿಂದ ಕಾರ್ಯಾಗಾರ ಇತ್ತೀಚೆಗೆ ಜರುಗಿತು.

- **ಮೇ ೬:** ಪುತ್ತೂರಿನ ಮೂಕಾಂಬಿಕಾ ನೃತ್ಯ ಕಲಾ ಶಾಲೆಯಲ್ಲಿ ಕಲಾವಿದೆ, ಸಂಪಾದಕಿ, ಪತ್ರಿಕೋದ್ಯಮ ಉಪನ್ಯಾಸಕಿ ಮನೋರಮಾ ಅವರಿಂದ ೩ ಗಂಟೆಗಳ ಕಾಲ 'ಭಾರತೀಯ ಶಾಸ್ತ್ರೀಯ ನೃತ್ಯ ಕಲೆ– ಜೀವನಾನುಸಂಧಾನ' ವಿಷಯದಲ್ಲಿ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ





- **೧೦ ಮೇ :** ವಿಶ್ವ ಮಾತೃ ದಿನದ ಅಂಗವಾಗಿ ಕೂಚಿಪುಡಿ ನೃತ್ಯ ಕಲಾವಿದೆ ವೈಜಯಂತಿ ಕಾಶಿ ಮತ್ತು ಅವರ ಪುತ್ರಿ ಪ್ರತೀಕ್ಷಾ ಕಾಶಿ ಅವರಿಂದ ಭೋಪಲ್‌ನ ಸಂಗೀತ ಭವನದಲ್ಲಿ ನೃತ್ಯ ಕಾರ್ಯಕ್ರಮ

- ೧೦, ೧೭, ೨೪ ಮೇ : ಮೈಸೂರಿನ ಭೂಷಣ್ ಅಕಾಡೆಮಿಯ ಆಶ್ರಯದಲ್ಲಿ ಮೈಸೂರಿನಲ್ಲಿ ಭರತನಾಟ್ಯ ಮೇಕಪ್ ತಂತ್ರಗಳ ಕುರಿತು ಕಾರ್ಯಾಗಾರ. ೮–೧೪ ಮೇ ಕಳರಿಯಪಟ್ಟು ಕಾರ್ಯಾಗಾರ, ೧೪–೨೦ ಮೇ ಪದ್ಮಶ್ರೀ ದರ್ಶನಾ ಝುವೇರಿ ಅವರಿಂದ ಮಣಿಪುರಿನೃತ್ಯದ ಬಗೆಗೆ ಕಾರ್ಯಾಗಾರ. ಇದೇ ಅಕಾಡೆಮಿಯ ಆಶ್ರಯದಲ್ಲಿ ಜೂನ್ ೫ನೇ ತಾರೀಕಿನಿಂದ ಒಂದು ವಾರದ ಪರ್ಯಂತ ಕಥಕ್ ನೃತ್ಯದ ಕುರಿತು ಪಂಡಿತ್ ಉಮಾ ಡೋಗ್ರಾ ಅವರಿಂದ ಕಾರ್ಯಾಗಾರ ಮತ್ತು ನೃತ್ಯ ಪ್ರದರ್ಶನ. ಆಸಕ್ತರಿಗೆ ವಸತಿ, ಆಹಾರದ ವ್ಯವಸ್ಥೆ ಇರುತ್ತದೆ.

- ಜೂನ್ ೧ ಮತ್ತು ಜುಲೈ ೧ : ಸಾಯಿ ಆರ್ಟ್ಸ್ ಇಂಟರ್‌ನ್ಯಾಶನಲ್ ಸಂಸ್ಥೆಯ ಆಶ್ರಯದಲ್ಲಿ ಭರತನಾಟ್ಯ, ಕಥಕ್, ಮೋಹಿನಿಯಾಟ್ಟಂನ ಸಾಯಿ ನೃತ್ಯೋತ್ಸವ, ಮಲ್ಲೇಶ್ವರಂನ ಸೇವಾ ಸದನ ಸಭಾಭವನದಲ್ಲಿ.

- 'ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಸಂಘದ ೬೫ನೇ ವಾರ್ಷಿಕೋತ್ಸವ ಮತ್ತು ಸಂಗದ ಸಂಸ್ಥಾಪಕ ಪ್ರಾಚಾರ್ಯ ದಿ.ಕಿರಿಕ್ಕಾಡು ಅವರ ಸಂಸ್ಮರಣೆಯೊಂದಿಗೆ ವರ್ಷಂಪ್ರತಿ ಸಾಹಿತ್ಯದ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಗೌರವಿಸುವ ಯಕ್ಷೋತ್ಸವ ಇತ್ತೀಚೆಗೆ ನಡೆಯಿತು. ಈ ಸಂದರ್ಭ ತೆಂಕುತಿಟ್ಟಿನ ಅಗ್ರಮಾನ್ಯ ಕಲಾವಿದ ಭಾಗವತ ಬಲಿಪ ನಾರಾಯಣ ಭಾಗವತರಿಗೆ ಕೀರಿಕ್ಕಾಡು ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಮಾರಂಭದಲ್ಲಿ ಪಂಚವಟಿ ಪ್ರಸಂಗದ ತಾಳಮದ್ದಳೆ, ದಕ್ಷ ಯಜ್ಞ, ವೀರ ಅಭಿಮನ್ಯು, ಸುದರ್ಶನ ವಿಜಯ ಯಕ್ಷಗಾನ ಬಯಲಾಟಗಳನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲೂ ವಿಶೇಷವಾಗಿ ಸುದರ್ಶನ ವಿಜಯ ಪ್ರಸ್ತುತಪಡಿಸಿದ ಮಕ್ಕಳ ತಂಡ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಭಾಗವತಿಕೆಯಲ್ಲಿ ಕಂಚಿನ ಕಂಠದ ಭವ್ಯಶ್ರೀ ಅವರ ಹಾಡುಗಾರಿಕೆ ಕಾರ್ಯಕ್ರಮದ ಒಟ್ಟು ಶ್ರೇಷ್ಠತೆಗೆ ನಾಂದಿಯಾಯಿತು. ಪ್ರಾರಂಭದಲ್ಲಿ ಕೆಲವು ಪದ್ಯಗಳನ್ನು ಹಾಡಿ ಬಯಲಾಟಕ್ಕೆ ಚಾಲನೆ ನೀಡಿದವಳು ಎಳೆಯ ಪ್ರತಿಭೆ ಜ್ಯೋತಿ ಮುದಿಯಾರು.

**(ಸಂಚಿಕೆಯಲ್ಲಿ ಪ್ರಕಟವಾಗಬೇಕಿದ್ದ 'ದರ್ಪಣ' ಅಂಕಣ ಧಾರಾವಾಹಿ ಪುಟಮಿತಿಗಳಿಂದ ಪ್ರಕಟಗೊಂಡಿಲ್ಲ. ಮುಂದಿನ ಸಂಚಿಕೆಯಿಂದ ಯಥಾಪ್ರಕಾರ ಮುಂದುವರಿಯಲಿದೆ. – ಸಂಪಾದಕರು)**

# ನಿಮ್ಮ ಬರಹ ನಮ್ಮ ಓದು...

**ಖ್ಯಾತ ಸಾಹಿತಿ, ವಿಮರ್ಶಕ ತಾಳ್ತಜೆ ವಸಂತ ಕುಮಾರ್, ಮಂಗಳೂರಿನ ಸರಸ ಲಲಿತಕಲಾ ಕಾಲೇಜಿನ ಪ್ರಾಂಶುಪಾಲೆ ಡಾ. ಆರತಿ ಶೆಟ್ಟಿ, ಅರುಣ್ ಕುಮಾರ್ ಉಳ್ಳಾಲ್, ಪದ್ಮನಾಭ ಭಟ್ ಪಳ್ಳ, ಕಲಾವಿದೆ ದೀಪಿಕಾ ಭಟ್, ಉಪನ್ಯಾಸಕರಾದ ರೋಸ್ ವೀರಾ ಡಿಸೋಜಾ, ರವೀಂದ್ರ ಸ್ವಾಮಿ, ಕುಂದಾಪುರದ ವಿದುಷಿ ಪ್ರವಿತಾ ಅಶೋಕ್, ಉಡುಪಿಯ ಕುಂಜಿಬೆಟ್ಟಿನ ಶ್ರೇಷ್ಠ, ಶಕುಂತಲಾ, ಬೆಳ್ತಂಗಡಿಯ ಶಾರ್ವರಿ, ಪುತ್ತೂರಿನ ಮೂಕಾಂಬಿಕಾ ನೃತ್ಯ ಕಲಾ ಶಾಲೆಯ ನೃತ್ಯ ಗುರು ವಿದ್ವಾನ್ ದೀಪಕ್ ಕುಮಾರ್, ಶ್ರೀಲಕ್ಷ್ಮಿ ಆಚಾರ್ಯ ಈ ಸಾಲಿನ ಪತ್ರಿಕೆಯ ಸದಸ್ಯರಾಗಿದ್ದಾರೆ.**

**ಬಡಗುತಿಟ್ಟು ಯಕ್ಷಗಾನ ಕಲಾವಿದ ಶಿವಾನಂದ ಹೆಗಡೆ, ಉಡುಪಿಯ ಶ್ರೀದೇವಿ, ಬೆಂಗಳೂರಿನ ರವಿಶಂಕರ ಶರ್ಮ, ನಂದಕುಮಾರ್, ವಿನಾಯಕ ಕೋಡ್ಸರ, ಕಣ್ವತೀರ್ಥ ನಾರಾಯಣ ಭಟ್, ಕೂಚಿಪುಡಿ ನೃತ್ಯ ಗುರು ವೀಣಾ ಮೂರ್ತಿ ವಿಜಯ್ ಶುಭ ಹಾರೈಸಿ ಪ್ರಶಂಸಿಸಿದ್ದಾರೆ.**

ನಿಜಕ್ಕೂ ಅಪೂರ್ವವಾದ ಕಾರ್ಯ ನಿಮ್ಮದು. ಅಭಿನಂದನೆಗಳು. ನೂಪುರದ ಭ್ರಮರಿಯ ಅಭಿವೃದ್ಧಿಗಾಗಿ ನೀವು ಆರಿಸಿಕೊಂಡ ಮಾರ್ಗದಲ್ಲಿ ಔನತ್ಯ ಕಾಣಲಿ. ನಿಮ್ಮ ವೆಬ್ಸೈಟ್ನಲ್ಲಿ ಲೇಖನಗಳನ್ನು ಓದಲು ಅತೀವ ಆನಂದಪಡುತ್ತೇನೆ.

**–ಡಿ. ಕೇಶವ, 'ಕಲಾಶ್ರೀ', ಬಾಸೆಲ್, ಸ್ವಿಟ್ಜರ್ಲ್ಯಾಂಡ್**

ನೂಪುರ ಭ್ರಮರಿ ಚಿಕ್ಕ, ಚೊಕ್ಕ ಆಕರ್ಷಕ ಪತ್ರಿಕೆ. ಚೆನ್ನಾಗಿದೆ. ಪತ್ರಿಕೆ ನಡೆಸುವುದು ಒಂದು ಸಾಹಸವೇ ಸರಿ. ಈ ಸಾಹಸಕಾರ್ಯದಲ್ಲಿ ನಿಮಗೆ ಶುಭವಾಗಲೆಂದು ಹಾರ್ದಿಕವಾಗಿ ಬಯಸುತ್ತೇನೆ. ಅಭಿನಂದನೆಗಳು.

**–ಸದಾನಂದ ಸುವರ್ಣ, ರಂಗಕರ್ಮಿ, ಮಂಗಳೂರು.**

ರಾಕೇಶ್ ಕುಮಾರ್ ಕಮ್ಮಜೆ ಅವರ 'ಕೆಂಡ ತಂದಿಟ್ಟರೂ ಕೆಂಡವಾಗದ ನರಸಿಂಹ ಭಟ್' ಲೇಖನ ಚೆಂಡೆ ಕಲಾವಿದ ನೆಡ್ಲೆ ನರಸಿಂಹ ಭಟ್ ಅವರ ಸೌಮ್ಯತೆಯನ್ನು ಎತ್ತಿ ಹಿಡಿದಿದೆ. ಹಾಗೂ ಎನ್ವೀ ವೈದ್ಯ ಅವರು ಬರೆದ 'ಶಿರಸಿಯಲ್ಲಿ ಮೊಟ್ಟಮೊದಲ ಕಥಕ್ ಡಿಪ್ಲೋಮಾ ತರಗತಿ' ಲೇಖನದಿಂದ ಶಿರಸಿ ನಗರದಲ್ಲಿ ಇಂತಹ ಶಿಕ್ಷಣ ಇರುವುದು ನೃತ್ಯಾಸಕ್ತರಿಗೆ ತಿಳಿಯುವಂತಾಯಿತು. ಅನೂಷಾ ಭಟ್ ಅವರ 'ಥಾಟ್–ಪರಿಚಯ' ಲೇಖನ ಸಂಪೂರ್ಣ ಮಾಹಿತಿ ನೀಡಿ ಓದುಗರಿಗೆ ಹಿಡಿಸುವಂತಿದೆ.

**– ಜ್ಯೋತಿ ಎಲ್. ಹೆಗಡೆ, ಸಿದ್ದಾಪುರ, ಉತ್ತರ ಕನ್ನಡ.**

ಸಂಚಿಕೆ ಸುಂದರವಾಗಿ ಬಂದಿದೆ. ಮಂಜೀರದಲ್ಲಿ ವ್ಯಕ್ತವಾದ ಆತಂಕಗಳನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ಕಲೆಯ ಹೊರತಾಗಿಯೂ, ಕಲೆಗಿಂತ ಬದುಕಿಗೆ ಇನ್ನಷ್ಟು ಅನಿವಾರ್ಯವಾದ ಸಂಗತಿಗಳ ಕುರಿತು ಇದೇ ರೀತಿಯ ದಿವ್ಯ ತಾತ್ಸಾರ ಕಾಣುತ್ತಿದೆ. ಇದು ಮತ್ತೂ ದೊಡ್ಡ ಬೆಂಕಿ. ಸಂಚಿಕೆ ಸಂಗ್ರಹಿಸುವಂತಿದೆ.

**– ಎನ್ವೀ ವೈದ್ಯ ಹೆಗ್ಗಾರ್, ಶಿರಸಿ**





ನೂಪುರ ಭ್ರಮರಿಯ ಕಳೆದ ಸಂಚಿಕೆಯ ಪುಟ ೨೨ರಲ್ಲಿ ಮದ್ದಳೆವಾದಕ ಅನಂತಕೃಷ್ಣ ಪಾಠಕ್ ಎಂಬ ಹೆಸರು ಅನಂತ ಪದ್ಮನಾಭ ಪಾಠಕ್ ಎಂದಾಗಬೇಕು. ಎ.ಪಿ.ಘಾಟಕ್ ಎಂದು ಚಾಲ್ತಿಯಲ್ಲಿದೆ.

**–ಡಿ. ಶ್ರೀಕಂತ ಘಾಟಕ್, ಕಾರ್ಕಳ**

**(ಕ್ಷಮಿಸಿ. ಇಂತಹ ಕಣ್ತಪ್ಪು ಪ್ರಿಂಟಿಂಗ್ ಮತ್ತು ಪುಟಸಂಪಾದನೆಯ ಸಮಯದಲ್ಲಿ ಆಗಿದೆ. ಮಂಜರಿಪ್ರಸಾದ್ ಸನಿಲ್ ಎಂಬವರ ಹೆಸರನ್ನು ಮಂಜರಿ ಚಂದ್ರ ಸನಿಲ್ ಎಂಬುದಾಗಿ ಓದಿಕೊಳ್ಳಬೇಕಾಗಿ ವಿನಂತಿ. ಜೊತೆಗೆ ನಿಮ್ಮ ಬರೆಹ ನಮ್ಮ ಓದು ವಿಭಾಗದಲ್ಲಿ ಮುದ್ರಿತವಾದ ಮೊದಲ ಅನಿಸಿಕೆ ಶ್ರೀಯುತ ಕುಂಬ್ಳೆ ಸುಂದರ ರಾವ್ ಅವರದ್ದು. ಮುದ್ರಣ ದೋಷದಿಂದಾಗಿ ಹೆಸರು ಬಿಟ್ಟುಹೋಗಿತ್ತು. ವಿಷಾದಿಸುತ್ತೇವೆ. ಮತ್ತು ಸರಿಪಡಿಸಿಕೊಳ್ಳುತ್ತೇವೆ. ಧನ್ಯವಾದಗಳು.**

**– ಸಂಪಾದಕೀಯ ಮಂಡಳಿ)**

ನಿಮ್ಮ ಕಲಾಸಕ್ತಿ ನಿಜಕ್ಕೂ ಸಂತಸ ತಂದಿದೆ. ನೃತ್ಯಕ್ಕೆ ಸಂಬಂಧಿಸಿದಂತೆ ನೂಪುರ ಭ್ರಮರಿಯ ಹುಟ್ಟು, ಬೆಳವಣಿಗೆ ಕಲಾವಿದರಿಗೆ ಮಾರ್ಗದರ್ಶಿಯಾಗಿದೆ. ಪ್ರಯತ್ನ ಉತ್ತುಂಗಕ್ಕೇರಲಿ.

**– ಕುಮಾರ್ ಪೆರ್ನಾಜೆ, ಪುತ್ತೂರು, ದ.ಕ**

ನೂಪುರ ಭ್ರಮರಿ ಸಂಚಿಕೆಗಳನ್ನು ಗಮನಿಸುತ್ತಿದ್ದೇನೆ. ವಿಶಿಷ್ಟ ಪ್ರಯತ್ನ. ನೃತ್ಯಾಸಕ್ತರು ಅಗತ್ಯ ಗಮನಿಸಬೇಕಾದ ಲೇಖನಗಳನ್ನು ಕಲೆ ಹಾಕುತ್ತಿದ್ದೀರಿ. ಶುಭಾಶಯಗಳು.

ದೂರದ ಅಮೇರಿಕದಲ್ಲಿದ್ದರೂ ನನ್ನ ಮಿತಿಯೊಳಗೆ ನೃತ್ಯದ ಒಲವನ್ನು ಉಳಿಸಿಕೊಂಡ ನನಗೆ ನಿಮ್ಮ ಸಂಚಿಕೆಯ ಬರಹಗಳು ತುಂಬ ಆತ್ಮೀಯವಾಗಿ ಕಂಡಿವೆ. ಉಡುಪಿಯ ಸಮೂಹ ರಂಗಚಟುವಟಿಕೆಗಳಲ್ಲಿ ಪಾಲ್ಗೊಂಡ ಸವಿ ನೆನಪುಗಳು ಮರುಕಳಿಸುತ್ತಿವೆ. ವಿಶೇಷ ಸಂಚಿಕೆಯಲ್ಲಿ ನನ್ನ ತಂದೆಯವರ(ಪ್ರೊ ಉದ್ಯಾವರ ಮಾಧವ ಆಚಾರ್ಯ) ರಂಗ ಕೃತಿ ಅಂಬೆಯನ್ನು ನನ್ನ ನೃತ್ಯ ಗುರುಗಳಾದ ಡಾ ವಸುಂಧರಾ ದೊರೆಸ್ವಾಮಿ ಅವರು ಪ್ರಸ್ತುತ ಪಡಿಸಿದುದರ ಬಗ್ಗೆ ನಿಮ್ಮ ವಸ್ತು ನಿಷ್ಠ ವಿಮರ್ಶೆ ಮನಸ್ಸಿಗೆ ಮುದ ನೀಡಿತು. ನೃತ್ಯ ಪ್ರಯೋಗಗಳಿಗೆ ಇಂಥ ವಿಮರ್ಶೆ ಅಗತ್ಯ.

ಉಡುಪಿಯ ಅಕಾಡೆಮಿ ಆಫ್ ಸ್ಕೂಲ್ ಆಪ್ ಮ್ಯೂಸಿಕ್ ಆಂಡ್ ಫೈನ್ ಆರ್ಟ್ಸ್ ಸಂಸ್ಥೆ ೧೯೫೭ ರಲ್ಲಿ ಸ್ಥಾಪನೆಗೊಂಡು ಹಿರಿಯ ಗುರುಗಳಾದ ಮೋಹನ್ ಕುಮಾರ್,ಭಾಗವತ ಮಾಧವ ರಾವ್ ಮತ್ತು ಇತ್ತೀಚೆಗೆ ರಾಮಕೃಷ್ಣ ಕೊಡಂಚ ಇವರುಗಳ ನೇತೃತ್ವದಲ್ಲಿ ಆಸಕ್ತರಿಗೆ ನೃತ್ಯ ಶಿಕ್ಷಣ ನೀಡುತ್ತ ಬಂದಿದೆ. ವಾರ್ಷಿಕ ಸಂಚಿಕೆಯ ಪರಿಭ್ರಮಣದಲ್ಲಿ ಇವರ ಪರಿಚಯ ಬಿಟ್ಟು ಹೋಗಿತ್ತು.

ನೂಪುರ ಭ್ರಮರಿ ನೂರ್ಕಾಲ ಬಾಳಲಿ.

**– ಭ್ರಮರಿ ಶಿವಪ್ರಕಾಶ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ**

ನೂಪುರ ಭ್ರಮರಿಯ ೨ನೇ ವರ್ಷದ ವರ್ಣಮಯ ಸಂಚಿಕೆ ಓದಿದೆ. ಪ್ರತಿಕ್ರಿಯಿಸಲು ವಿಳಂಬವಾದದಕ್ಕೆ ಕ್ಷಮಿಸಿ.
ನೂಪುರದ ಕಲರ್‌ಫುಲ್ ಮುಖಪುಟ, ವಿನ್ಯಾಸ ತುಂಬಾ ಆಕರ್ಷಕವಾಗಿತ್ತು. ಸಂಪಾದಕೀಯದಲ್ಲಿ

ಎರಡು ವರ್ಷಗಳ ಯಶೋಗಾಥೆಯನ್ನು ಹೃದ್ಯವಾಗಿ ಬರೆದಿದ್ದೀರಿ. ಹತ್ತಾರು ಏಳು–ಬೀಳುಗಳ ತಾಕಲಾಟದ ನಡುವೆಯೂ ಭ್ರಮರಿ ಸಹೃದಯಿ ಕಲಾರಾಧಕರ ಕಣ್ಮಣಿಯಾಗಿ ಬೆಳೆದಿದ್ದು ನಿಜಕ್ಕೂ ಅಚ್ಚರಿ. ಮುಂದೆಯೂ ಓದುಗರ ಮನದಲ್ಲಿ ನೂಪುರ ಭ್ರಮರಿ ಸದಾ ಅನಭಿಷಿಕ್ತ ಸಾಮ್ರಾಜ್ಞಿಯಾಗಿ ಮೆರೆಯಲಿ.

ಇಡೀ ಸಂಚಿಕೆ ರೂಪಿಸುವಲ್ಲಿ ಸಂಪಾದಕೀಯ ಮಂಡಳಿಯ ಶ್ರದ್ಧೆ, ದಕ್ಷತೆ, ಕ್ರಿಯಾಶೀಲತೆ, ಬದ್ಧತೆ ಪ್ರಶಂಸನೀಯ. ಅನುಶ್ರೀ ಬಂಡಾಡಿಯವರ 'ಹೆಜ್ಜೆಯ ಅನುರಣಿಸುವ ಗೆಜ್ಜೆಯು ನಾ' ಸ್ವಗತ ಲಹರಿ ಸಂಕ್ಷಿಪ್ತವಾಗಿದ್ದರೂ ಮನದಾಲದಲ್ಲಿ ಮತ್ತೆ ಮತ್ತೆ ಅನುರಣಿಸುವಂತಿತ್ತು.

ಯಕ್ಷಗಾನದ ಧ್ರುವತಾರೆ, ದಂತಕತೆ ಕೆರೆಮನೆ ಶಂಭು ಹೆಗಡೆಯವರಿಗೆ ಸಲ್ಲಿಸಿದ ನುಡಿನಮನ ಭಾವಪರವಶಗೊಳಿಸಿತು. ಪರಿಪಕ್ವ ಚೇತನ ಕೆರೆಮನೆ ಶಂಭು ಹೆಗಡೆಯವರು ಯಕ್ಷಗಾನದ ವೇಷದಲ್ಲೇ ಅಸ್ತಂಗತರಾಗಿದ್ದರೂ, ಕನ್ನಡ ಯಕ್ಷಗಾನ ಕ್ಷೇತ್ರಕ್ಕೆ ತುಂಬಲಾರದ ನಷ್ಟ. ಕನ್ನಡದ ಯಾವ ಪತ್ರಿಕೆಯೂ ನೂಪುರದಷ್ಟು ಸಶಕ್ತವಾಗಿ, ಸತ್ವಶಾಲಿಯಾಗಿ ಅವರ ವ್ಯಕ್ತಿತ್ವವನ್ನು ಬಿಂಬಿಸಿರಲಿಲ್ಲ. ನೂಪುರದ ನುಡಿ ನಮನ ವಿಶಿಷ್ಟವಾಗಿತ್ತು.

ನೂಪುರ ಭ್ರಮರಿ ಸಂಚಿಕೆಯಿಂದ ಸಂಚಿಕೆಗೆ ವೈವಿಧ್ಯತೆ, ಮೌಲ್ಯಯುತ ಲೇಖನಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಸಾಧನೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವುದು ಸಂತಸಕರ ಸಂಗತಿ. ಪತ್ರಿಕೆಯ ಜೈತ್ರಯಾತ್ರೆ ಮುಂದುವರಿಯಲಿ. ನಮ್ಮ ತ್ರಿಕರಣಪೂರ್ವಕ ಬೆಂಬಲ ಯಾವಾಗಲೂ ಇದ್ದೇ ಇರುತ್ತದೆ.

**– ಸುರೇಶ್ ಬಿ.ವಿ.ಜಾಲಹಳ್ಳಿ, ರಾಯಚೂರು.**

ಹೊಸ ಹರೆಯದ ಹುಡುಗಿಯ ಹಾಗೆ ಮೈ ತುಂಬಿಕೊಂಡ ವಾರ್ಷಿಕ ಸಂಭ್ರಮದ ನೂಪುರಕ್ಕೆ ಮಂಟಪರ ಲಾವಣ್ಯದ ಸೊಗಸು, ಸುಂದರ ವಿನ್ಯಾಸ. ಅಭಿನಂದನೆಗಳು.

**–ಹರೀಶ್ ಟಿ.ಜಿ., ಕನ್ನಡ ಉಪನ್ಯಾಸಕರು, ಆಳ್ವಾಸ್ ಕಾಲೇಜು, ಮೂಡಬಿದ್ರೆ**

ಪತ್ರಿಕೆಯ ಎಲ್ಲಾ ಸಂಚಿಕೆಗಳು ಬಹಳ ವೈವಿಧ್ಯಮಯವಾಗಿಯೂ, ನೃತ್ಯ ಶಿಕ್ಷಾರ್ಥಿಗಳಿಗೆ ಸರ್ವ ರೀತಿಯಲ್ಲಿಯೂ ಸಹಕಾರಿಯಾಗಿ, ಸುಂದರವಾಗಿ ಮೂಡಿ ಬರುತ್ತಿದೆ. ಎಲ್ಲಾ ರೀತಿಯಲ್ಲಿಯೂ ನಿಮಗೆ ಶುಭವನ್ನು ಹಾರೈಸುತ್ತೇವೆ.


**– ಅಂಬಿಕಾ ಬಿ.ಜಿ., ಹಾಸನ**



***ಸಂಚಿಕೆಗಾಗಿ ಸಹಕರಿಸಿದವರು***

**ಶ್ರೀನಿವಾಸ ದೇಶಪಾಂಡೆ**

**ಹಿರಿಯ ಪ್ರಬಂಧಕರು,**
**ಕರ್ನಾಟಕ ಬ್ಯಾಂಕ್,**
**ಮಂಗಳೂರು.**







**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು, ಮುದ್ರಣ ನಿಧಿಗೆ ಸಹಕರಿಸಬಹುದು, ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು. ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ದ.ಕ. (ಮೊಬೈಲ್ : 99640 28415)
**ಪಂಕಜ್ ಸವಣೂರು,** ಪುತ್ತೂರು (ಸಿ.ಡಿ. ಮತ್ತು ಪುಸ್ತಕ ವಿತರಕರು) (ಮೊಬೈಲ್ : 94804 81438)
**ಪರಶುರಾಮ ಕಾಮತ್,** ಕುಂದಾಪುರ. (ಮೊಬೈಲ್ : 98446 14752)
**ಎನ್.ವಿ.ವೈದ್ಯ,** ಶಿರಸಿ (ಮೊಬೈಲ್ : 94499 87250)
**ಸಂಜಯ್ ಭಟ್ ಬೆಣ್ಣೆ,** ಉತ್ತರಕನ್ನಡ (ಮೊಬೈಲ್ : 94489 18505)
**ಸಿ. ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. (ಮೊಬೈಲ್ : 9986372503)
**ಸುನೀಲ್ ಕುಲಕರ್ಣಿ,** ಮಂಗಳೂರು (ಮೊಬೈಲ್ : 98805 43783)
**ಪ್ರೊ. ವೆಂಕಟೇಶ ಪೈ,** ಮುಂಬೈ (ಮೊಬೈಲ್ :098699 21397)
**ರಾಧಿಕಾ ವಿಟ್ಲ,** ಚೆನ್ನೈ (ಮೊಬೈಲ್ :94447 05842)
**ರಾಜಗೋಪಾಲ್,** ಮಡಿಕೇರಿ (ಮೊಬೈಲ್ :99647 91328)

## ನಮ್ಮ ಬಳಗದ ಮತ್ತಷ್ಟು ಮಂದಿ...

**ಉಳ್ಳಾಲ ಮೋಹನ ಕುಮಾರ್,** ಹಿರಿಯ ನೃತ್ಯ ಗುರು, ನಾಟ್ಯನಿಕೇತನ, ಕೊಲ್ಯ, ಮಂಗಳೂರು
**ಸುದರ್ಶನ ಎಂ. ಎಲ್,**
ನೃತ್ಯ ಗುರು ಮತ್ತು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಉಪನ್ಯಾಸಕರು, ಪುತ್ತೂರು
**ಸುನೀತಾ ಶ್ರೀಪತಿ ಉಪಾಧ್ಯಾಯ,** ಮುಲ್ಕಿ, ಮಂಗಳೂರು.
**ಡಾ. ವಸಂತಕುಮಾರ್ ಪೆರ್ಲ,** ನಿಲಯ ನಿರ್ದೇಶಕರು, ಕಾರವಾರ ಆಕಾಶವಾಣಿ ಕೇಂದ್ರ

### ನೂಪುರ ಭ್ರಮರಿಯ ಬಳಗವು ಭರತನಾಟ್ಯ, ನೃತ್ಯಶೈಲಿಗಳಿಗೆ ಸಂಬಂಧಿಸಿದಂತೆ ಅರಿವಿನ ವಿಸ್ತರಣೆಗಾಗಿ

1. ಭಾರತೀಯ ಶಾಸ್ತ್ರೀಯ ನೃತ್ಯಗಳು ಮತ್ತು ಜೀವನಾನುಸಂಧಾನ
2. ಭರತನಾಟ್ಯದ ಆಂಗಿಕಾಭಿನಯ
3. ನಾಯಿಕಾ–ನಾಯಕಾ ಭಾವ
4. ಹಸ್ತಮುದ್ರಾ ವಿನ್ಯಾಸಗಳು ಮತ್ತು ಸಂಶೋಧನೆ
5. ನೃತ್ಯ ಇತಿಹಾಸ ಮತ್ತು ಭರತನಾಟ್ಯದ ಪುನರುತ್ಥಾನ
6. ನೃತ್ಯ ಗ್ರಂಥಗಳು ಮತ್ತು ಅವುಗಳೆಡೆಗೆ ಸಮಗ್ರ ದೃಷ್ಟಿ

**ಮೇಲ್ಕಂಡ ವಿಚಾರಗಳನ್ನೂ ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದು, ಉಪನ್ಯಾಸ ಕಾರ್ಯಕ್ರಮಗಳಿಗಾಗಿ ಆಸಕ್ತರು ಪತ್ರಿಕೆಯ ಸಂಪಾದಕರನ್ನು ಸಂಪರ್ಕಿಸಬಹುದು. ದೂ : 9964140927**